623

ಮೈಸೂರ ಗೆಜೆಟ್.

ನಂ. 38] ಸರ್ಕಾರದಿಂದ ಪ್ರಾಂಭಿಷ್ ಆದ್ದು. [ನಂ. 48.

ಬೆಂಗಳೂರು, ಗುರುವಾರ, ಡಿಸೆಂಬರ ತಾ|| 10, ಸನ 1903.

IIIನೆ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವು ಇಲಾಖೆ.

1903ನೆ ವರುಷದ IIIನೆ ನಂಬರಿನ ರೆಗ್ಯುಲೇಷನ್.

(1903ನೆ ವರುಷದ ನವಂಬರ 4ನೆ ತಾರೀಖಿನಲ್ಲಿ ಮಂಜೂರಾದ್ದು.)

ಮೈಸೂರು ಪಟ್ಟಣವನ್ನು ಉತ್ತಮ ಪಡಿಸುವ ವಿಚಾರದಲ್ಲಿಯು ಮತ್ತು ಅದನ್ನು ಉತ್ತರೋತ್ತರ ವಿಸ್ತಾರ ಪಡಿಸಲು ಸ್ಥಳ ಹೊಂದಿಸುವ ವಿಚಾರದಲ್ಲಿಯು ಆಗಿರುವ ರೆಗ್ಯುಲೇಷನ್.

ಪೀಠಿಕೆ.

ಮೈಸೂರು ಪಟ್ಟಣವನ್ನು ಉತ್ತಮಪಡಿಸುವದಕ್ಕೋಸ್ಕರವು ಉತ್ತರೋತ್ತರ ವೃದ್ಧಿ ಪಡಿಸುವದಕ್ಕೋಸ್ಕರವು ಮತ್ತು ಮೇಲ್ಕಂಡ ಉದ್ದೇಶಗಳನ್ನು ಜಾರಿ ತರುವ ಬಗ್ಯೆ ಪ್ರತ್ಯೇಕ ತರದ ಅಧಿಕಾರಗಳನ್ನುಳ್ಳ ಒಂದು ಪಾರುಪತ್ಯಗಾರರ ಸಭೆಯನ್ನು (Board of Trustees ಟ್ರಸ್ಟಿಗಳ ಬೋರ್ಡ) ನೇಮಿಸೋಣ ನಿಯುಕ್ತವಾದುದರಿಂದ ; ಘನವನ್ನೈದಿದ ಶ್ರೀವರ್ಮಾ ಮಹಾರಾಜಾ ಸಾಹೇಬರವರು ಇದರಡೀ ಕಂಡಂತೆ ಕಾನೂನನ್ನು ಏರ್ಪಡಿಸಿರುತ್ತಾರೆ :—

1ನೆ ಅಧ್ಯಾಯ.

ಅವತರಣಿಕೆ.

ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಅಮಲ್ ಷುರು.

1. (1) ಈ ರೆಗ್ಯುಲೇಷನ್ "1903ನೆ ವರುಷದ ಸಿಟಿ ಆಫ್ ಮೈಸೂರು ಇಂಪ್ರುವ್‌ಮೆಂಟ್ ರೆಗ್ಯುಲೇಷನ್" ಎಂದು ಕರಿಯಲ್ಪಡಬಹುದು ;

(2) ಇದರಲ್ಲಿ ಮುಂದೆ ಅನ್ಯಥಾ ನೇಮಿಸಲ್ಪಟ್ಟ ಹೊರ್ತು, ಇದು ಮೈಸೂರು ಪಟ್ಟಣಕ್ಕೆ ಮಾತ್ರವೆ ವ್ಯಾಪಿಸತಕ್ಕದ್ದು ;

(3) ಇದು ಸರ್ಕಾರಿ ಗೆಜೆಟಿನಲ್ಲಿ ಇಸ್ತಿಹಾರ ಮೂಲಕವಾಗಿ ಗವರ್ನಮೆಂಟಿನವರು ವಿಧಿಸಬಹುದಾದ ತಾರೀಕು ಲಾಗಾಯಿತು ಜಾರಿಯಲ್ಲಿ ಬರತಕ್ಕದ್ದು.

ಅರ್ಥ ವಿವರಣೆ.

2. ಈ ರೆಗ್ಯುಲೇಷನಿನಲ್ಲಿ ಪ್ರಮೇಯದಿಂದಾಗಲಿ ಸಂದರ್ಭದಿಂದಾಗಲಿ ವಿರೋಧವಾದ್ದೇನಾದರು ಇದ್ದರೇನೆ ಶಿವಾಯಿ,—

"ಪಟ್ಣ"

"ಮೈಸೂರುಪಟ್ಣ" ಅಥವಾ "ಪಟ್ಣ" ಅಂದರೆ ಗವರ್ನಮೆಂಟಿನವರು ಮೈಸೂರು ಪಟ್ಣದಲ್ಲಿ ಜಾರಿಯಲ್ಲಿರುವ (ಮತ್ತು ಇದರಲ್ಲಿ "ಮ್ಯುನಿಸಿಪಲ್ ರೆಗ್ಯುಲೇಷರ್ಷ" ಎಂದು ಮುಂದೆ ಸೂಚಿಸಲ್ಪಡತಕ್ಕ) 1871ನೆ ವರುಷದ ಮ್ಯುನಿಸಿಪಲ್ ರೆಗ್ಯುಲೇಷರ್ಷಗಳಿಗೆ ಅನುಸಾರವಾಗಿ ಆಗಿಂದಾಗ್ಗೆ ನೇಮಿಸಿರುವ ಮೈಸೂರು ಪಟ್ಣದ ಮ್ಯುನಿಸಿಪಲ್ ಸರಹದ್ದುಗಳಲ್ಲಿ ಅಡಗಿರತಕ್ಕ ಸ್ಥಳ ಎಂಬ ಅರ್ಥ.

"ಇಂಪ್ರೂವ್‌ಮೆಂಟ್ ಕಮಿಟಿ."

"ಇಂಪ್ರೂವ್‌ಮೆಂಟ್ ಕಮಿಟಿ" ಅಂದರೆ ಮೈಸೂರು ಪಟ್ಣವನ್ನು ಉತ್ತಮ ಪಡಿಸುವದಕ್ಕಾಗಿ ಒಂದು ಉಪಾಯ ಮಾಡುವ ಉದ್ದೇಶಕ್ಕೋಸ್ಕರ, 1902ನೆ ವರುಷದ ಸೆಪ್ಟಂಬರ್ 16ನೆ ತಾರೀಕಿನ ನಂಬರು 4168-79—L. F. 36—02 ಸರ್ಕಾರಿ ಹುಕುಂನಲ್ಲಿ ನೇಮಿಸಲ್ಪಟ್ಟಿರುವ ಕಮಿಟಿ ಎಂದರ್ಥ.

"ಭೂಮಿ"

"ಭೂಮಿ" ಎಂಬ ಮಾತು ಮೇಲ್ಕಟ್ಟಡ ಉಳ್ಳ ಅಥವಾ ನೀರಿನಿಂದ ಮುಚ್ಚಲ್ಪಟ್ಟಿರುವ ಭೂಮಿಯನ್ನು ಅಡಗಿಸಿಕೊಳ್ಳುತ್ತೆ.

"ಬೀದಿ"

"ಬೀದಿ" ಎಂಬದರಲ್ಲಿ ಯಾವದೊಂದು ರಾಜಮಾರ್ಗ, ಒಡ್ಡಿನಮೇಲೆ ಹಾಯುವ ದಾರಿ, ಸೇತುವೆ, ಸಂಕ, ಕಮಾನು, ರಸ್ತೆ, ಸಂದಿ, ಕಾಲುದಾರಿ, ಚೌಕ, ಅಂಗಳ, ಉಪವನದ ಮಾರ್ಗ ಅಥವಾ ದಾರಿ ಬೀದಿಯಾಗಿರಲಿ ಇಲ್ಲದಿರಲಿ, ಇವುಗಳು ಅಡಗಿರುತ್ತವೆ.

ಇತರ ಪದಗಳು.

ಇತರ ಪದಗಳು, ಮ್ಯುನಿಸಿಪಲ್ ರೆಗ್ಯುಲೇಷರ್ಷಗಳಲ್ಲಿ ಅದೇ ಪದಗಳಿಗೆ ಯಾವ ಅರ್ಥವನ್ನು ಆರೋಪಿಸಿಧೆಯೋ, ಆ ಅರ್ಥವನ್ನುಂಟಾಗಿರತಕ್ಕದ್ದು.

IIನೆ ಅಧ್ಯಾಯ.

ಬೋರ್ಡ್ ಆಫ್ ಟ್ರಸ್ಟೀಸ್ ಕುರಿತು.

ಈ ರೆಗ್ಯುಲೇಷನಿನಂತೆ ಬೋರ್ಡಿನವರು ಅಮಲ್‌ಜಾರಿ ಮಾಡುವದು.

3. ಈ ರೆಗ್ಯುಲೇಷನಿನಲ್ಲಿರುವ ನಿಯಮಗಳನ್ನು ಜಾರಿಯಲ್ಲಿ ತರತಕ್ಕ ಕರ್ತವ್ಯವು, ಇದರಲ್ಲಿ ಮುಂದೆ ಇರುವ ವಿಧ್ಯಮಾನಗಳಿಗು ಮೇರೆಗಳಿಗು ಒಳಗಾಗಿ, "ಮೈಸೂರು ಪಟ್ಣವನ್ನು ಉತ್ತಮಪಡಿಸುವದಕ್ಕಾಗಿರುವ ಟ್ರಸ್ಟೀಸ್" ಗಳೆಂದು ಕರೆಯಲ್ಪಡುವ ಒಂದು ಬೋರ್ಡು ಯಾ ಸಮಾಜಕ್ಕೆ ಸೇರಿರತಕ್ಕದ್ದು. ಆ ಸಮಾಜವು ಇದರಲ್ಲಿ ಮುಂದೆ "ಬೋರ್ಡು" ಎಂಬದಾಗಿ ಸೂಚಿಸಲ್ಪಡುತ್ತೆ. ಆ ಬೋರ್ಡು ಒಂದು ಕೂಡಿಸಿದ ಸಮುದಾಯವಾಗಿಯೂ, ಸ್ಥಿರವಾದ ಪರಂಪರೆಯುಳ್ಳದ್ದಾಗಿಯೂ, ಒಂದು ಸಾಮಾನ್ಯ ಮೊಹರು ಉಳ್ಳದ್ದಾಗಿಯು, ಇರತಕ್ಕದ್ದಲ್ಲದೆ ಅದರ ಸಮುದಾಯದ ಹೆಸರಿನಲ್ಲಿ ಬೋರ್ಡು ಅನ್ಯರ ಮೇಲೂ, ಅನ್ಯರು ಆ ಬೋರ್ಡಿನ ಮೇಲೂ, ಧಾವೆ ಮಾಡಬಹುದು.

ಬೋರ್ಡಿನ ಏರ್ಪಾಟು.

4. ಬೋರ್ಡಿಗೆ ಎಂಟು ಟ್ರಸ್ಟಿಗಳು ಇರತಕ್ಕದ್ದು. ಅದು ಹ್ಯಾಗೆಂದರೆ:—

ಗವರ್ನಮೆಂಟ್ಟಿನವರಿಂದ ಮೊಕರರು ಆಗಬೇಕಾದ ಒಂದು ಛೇರ್ಮೆನ್ (ಅಧ್ಯಕ್ಷ);

ಮೈಸೂರು ಪಟ್ಣದ ಮ್ಯುನಿಸಿಪಲ್ ಕಮ್ಮಿಷನಿನ ತತ್ಕಾಲದಲ್ಲಿರುವ ವೈಸ್ ಪ್ರಸಿಡೆಂಟರು;

ಮೈಸೂರು ಡಿಸ್ಟ್ರಿಕ್ಟಿನ ತತ್ಕಾಲದಲ್ಲಿರುವ ಸಿವಿಲ್ ಸರ್ಜನ್;

ಗವರ್ನಮೆಂಟಿನವರಿಂದ ಮೊಕರರು ಆಗಬೇಕಾದ 3 ಟ್ರಸ್ಟಿಗಳು;

38ನೆ ಪ್ರಕರಣ ಪ್ರಕಾರ ಗವರ್ನಮೆಂಟಿನವರು ವಿಧಿಸಬಹುದಾದ ನಿಬಂಧನೆಗಳಿಗೆ ಅನುಸಾರವಾಗಿ ಮೈಸೂರು ಪಟ್ಣದ ಮ್ಯುನಿಸಿಪಲ್ ಕಮ್ಮಿಷನರುಗಳು ತಮ್ಮ ಸಂಘದೊಳಗೇನೆ ಚುನಾಯಿಸಬೇಕಾದ 2 ಟ್ರಸ್ಟಿಗಳು; ಆದರೆ ಅವರಿಬ್ಬರುಗಳ ಚುನಾವಣಿಯು ಗವರ್ನಮೆಂಟಿನವರ ಅನುಮತಿಗೆ ಒಳಪಟ್ಟದ್ದಾಗಿರಬೇಕು. ಅಥವಾ ಈರೀತಿಯ ಚುನಾವಣಿಯು ಇಲ್ಲದಿರುವ ಪಕ್ಷದಲ್ಲಿ ಗವರ್ನಮೆಂಟಿನವರು ಪಟ್ಣದ ಮ್ಯುನಿಸಿಪಲ್ ಕಮ್ಮಿಷನರುಗಳ ಪೈಕಿ ಆ 2 ಟ್ರಸ್ಟಿಗಳನ್ನು ನೇಮಿಸಬೇಕು;

ಟ್ರಸ್ಟಿಗಳ ಹೆಸರುಗಳನ್ನು ಇಸ್ತಿಹಾರ್ ಮೂಲಕ ತಿಳಿಸಬೇಕು.

5. ಯಾವ ಟ್ರಸ್ಟಿಗಳನ್ನು ಗವರ್ನಮೆಂಟಿನವರು ನೇಮಿಸಿರುತ್ತಾರೆಯೋ, ಅಥವಾ ಮ್ಯುನಿಸಿಪಲ್ ಕಮ್ಮಿಷನರುಗಳಿಂದಾದ ಯಾವ ಟ್ರಸ್ಟಿಗಳ ಚುನಾವಣೆಯನ್ನು ಗವರ್ನಮೆಂಟಿನವರು ಒಪ್ಪಿರುತ್ತಾರೆಯೋ, ಅಂಥಾ ಟ್ರಸ್ಟಿಗಳ ಹೆಸರುಗಳನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಇಸ್ತಿಹಾರ್ ಮೂಲಕವಾಗಿ ನಿರೂಪಿಸಬೇಕು.

ಟ್ರಸ್ಟಿಗಳ ಉದ್ಯೋಗದ ವಾಯಿದೆ.

6. (1) ಗವರ್ನಮೆಂಟಿನವರ ಅಪ್ಪಣೆ ಇರುವವರಿಗೂ ಬೋರ್ಡಿನ ಛೇರ್ಮೆನ್ನು ತಮ್ಮ ಉದ್ಯೋಗದಲ್ಲಿರಬೇಕು.

(2) ಉದ್ಯೋಗ ಪ್ರಯುಕ್ತವಾಗಿ ಇಲ್ಲದಿರುವ ಇತರ ಟ್ರಸ್ಟಿಗಳು, ಹಿಂದಿನ ಪ್ರಕರಣದ ಪ್ರಕಾರ ತಮ್ಮ ಹೆಸರುಗಳು ನಮೂದಾಗಿರುವ ಸರ್ಕಾರಿ ಗೆಜೆಟ್ಟಿನ ತಾರೀಕು ಲಾಗಾಯಿತು 2 ವರುಷಗಳ ಪರ್ಯಂತರ, ತಮ್ಮ ಉದ್ಯೋಗದಲ್ಲಿರಬೇಕು.

ಆಕಸ್ಮಿಕವಾದ ಖಾಲಿಗಳು.

7. (1) ಮರಣದಿಂದಾಗಲಿ, ರಾಜೀನಾಮೆಯಿಂದಾಗಲಿ ಅಥವಾ ಅಯೋಗ್ಯತೆಯಿಂದಾಗಲಿ, ಆಕಸ್ಮಿಕವಾಗಿ ಖಾಲಿ ಆಗುವ ಚೇರಮೆನ್ನಲ್ಲದಿರುವ ಟ್ರಸ್ಟಿಯ ಸ್ಥಾನವು, ಟ್ರಸ್ಟಿಗಳ ಪ್ರಥಮ ಚುನಾವಣೆ ಮತ್ತು ನೊಕರರಾತಿ ನಡದ ವಿಧಾನದಲ್ಲಿಯು, ಅವುಗಳನ್ನು ಮಾಡಿದ ಅಧಿಕಾರಿಗಳಿಂದಲು, ಮತ್ತು ಆ ಚುನಾವಣೆ ನೊಕರರಾತಿಗೆ ಲಗಾವಾಗುವ ನಿಯಮಗಳಿಗೆ ಸಾಧ್ಯವಾದಷ್ಟು ಅನುಸಾರವಾಗಿಯು, ಒಂದು ತಿಂಗಳೊಳಗಾಗಿ ಭರ್ತಿ ಆಗತಕ್ಕದ್ದು: ಆದರೆ ಹಾಗೆ ಚುನಾಯಿಸಲ್ಪಟ್ಟ ಟ್ರಸ್ಟಿಯು, ಉದ್ಯೋಗ ಬಿಡುವ ಟ್ರಸ್ಟಿಯು ತನ್ನ ಉದ್ಯೋಗವನ್ನು ಅಂಥಾ ಖಾಲಿ ಬೀಳದ ಪಕ್ಷದಲ್ಲಿ ಯಾವ ಪರ್ಯಂತರ ಇಟ್ಟುಕೊಳ್ಳಬಹುದಾಗಿತ್ತೊ ಆ ಮಾಯಿದೆ ವರಿಗೆನೇ, ತನ್ನ ಸ್ಥಾನದಲ್ಲಿರತಕ್ಕದ್ದು.

3 ತಿಂಗಳುಗಳಿಗಿಂತ ಅಧಿಕ ಕಾಲಗಳಿಗೆ.

(2) ಚೇರಮೆನ್ನಲ್ಲದೆ ಇರುವ ಟ್ರಸ್ಟಿಯು,—

(a) 3 ತಿಂಗಳಿಗೆ ಅಧಿಕವಾದ ಕಾಲ ಬಾರದೆ ಇರುವ ಅಭಿಪ್ರಾಯವನ್ನು ತಿಳಿಯಪಡಿಸಿ ಪಟ್ಟಣದಿಂದ ಹೊರಟು ಹೋಗೋಣ;

(b) 3 ತಿಂಗಳಿಗೆ ಅಧಿಕವಾದ ಕಾಲ ಬೋರ್ಡಿನ ಮೀಟಿಂಗುಗಳಿಗೆ ಬರಲು ಯಾವ ಕಾರಣದಿಂದಾಗಲಿ ಅಶಕ್ತನಾಗಿರೋಣ;

(c) 3 ತಿಂಗಳಿಗೆ ಅಧಿಕವಾದ ಕಾಲ ಪಟ್ಟಣದಲ್ಲಿ ಇಲ್ಲದಿರೋಣ;

ಈ ಪಕ್ಷಗಳಲ್ಲಿ, ಅವನ ಸ್ಥಾನಕ್ಕೆ, ಅವನ ಗೈರುಹಾಜರಿ ಅಥವಾ ಅಶಕ್ತಿ ಇರುವ ಪರ್ಯಂತರ ಅಥವಾ ಅವನು ಟ್ರಸ್ಟಿ ಸ್ಥಾನವನ್ನು ಬಿಡುವ ಪರ್ಯಂತರ, ಮತ್ತೊಬ್ಬ ಮನುಷ್ಯನನ್ನು ಚುನಾಯಿಸಬೇಕು ಯಾ ನೊಕರರು ಮಾಡಬೇಕು, ಮತ್ತು ಹಾಗೆ ಬದಲಿ ಕೆಲಸ ಮಾಡುವ ಮನುಷ್ಯನನ್ನು ಈ ರೆಗ್ಯುಲೇಷನಿನ ಸಮಸ್ತ ಉದ್ದೇಶಗಳಿಗೋಸ್ಕರ ಒಂದು ಟ್ರಸ್ಟಿ ಆಗಿ ಎಣಿಸಬೇಕು.

3 ತಿಂಗಳೊಳಗೆ ಆವಶ್ಯಕವಾದರೆ ಬದಲಿ ನೊಕರರಾತಿಯ ಚುನಾವಣೆ ಮಾಡಲು ಅಧಿಕಾರ ಕೊಡುವ ನಿಯಮ.

(3) ಯಾವ ಟ್ರಸ್ಟಿ ಆಗಲಿ ಗೈರು ಹಾಜರು ಆದರೆ, ಗೈರುಹಾಜರಾದ ಟ್ರಸ್ಟಿಯು ನೊಕರರು ಆಗಿರುವ ಪಕ್ಷದಲ್ಲಿ ಗವರ್ನಮೆಂಟಿನವರ ಅಭಿಪ್ರಾಯದಂತೆಯೋ, ಅಥವಾ ಗೈರುಹಾಜರಾದ ಟ್ರಸ್ಟಿಯು ಚುನಾಯಿಸಲ್ಪಟ್ಟಿರುವ ಪಕ್ಷದಲ್ಲಿ ಮ್ಯುನಿಸಿಪಲ್ ಕಮಿಷನರವರಗಳಿಗೆ ಬೋರ್ಡು ಮನವಿ ಮಾಡಿಕೊಂಡಾಗಲೋ, ಮತ್ತೊಬ್ಬ ಮನುಷ್ಯನನ್ನು 3 ತಿಂಗಳಿಗೆ ಕಮ್ಮಿಯಾದ ಕಾಲಕ್ಕೆ ಟ್ರಸ್ಟಿಯಾಗಿ ಚುನಾಯಿಸಲು ಅಥವಾ ನೊಕರರು ಮಾಡಲು, ಹಿಂದೆ ಬಂದಿರುವ ಕಡೆ ಉಪಪ್ರಕರಣದ ಯಾವ ನಿಯಮದಿಂದಾಗಲಿ ಅಡ್ಡಿ ಇರುವದಿಲ್ಲ.

ಟ್ರಸ್ಟಿಗಳು ತಮ್ಮ ಸ್ಥಾನವನ್ನು ಖಾಲಿ ಮಾಡಬೇಕಾದ ಕಾರಣಗಳು

8. (1) ಯಾವ ಟ್ರಸ್ಟಿಯಾದರು,

(a) ನಾದಾರ ಆದರೆ; ಅಥವಾ

(b) 6 ತಿಂಗಳಿಗೆ ಅಧಿಕವಾಗಿ ಕೈದಿನಿಂದ ಶಿಕ್ಷಿಸಲ್ಪಡಬಹುದಾದ ಅಪರಾಧಕ್ಕೆ, ಕೈದಿನಿಂದ ಶಿಕ್ಷಿಸಲ್ಪಟ್ಟರೆ ಅಥವಾ ಗಡಿಪಾರು ದಂಡನೆಗೆ ಶಿಕ್ಷಿಸಲ್ಪಟ್ಟರೆ, ಅಂಥಾ ಶಿಕ್ಷೆಯು ರದ್ದಾದರೇನೆ ಅಥವಾ ಬದಲಾಯಿಸಲ್ಪಟ್ಟರೇನೆ ಹೊರ್ತು; ಅಥವಾ

(c) ಬೋರ್ಡಿನ ತಾಬೆಯಲ್ಲಿ ಲಾಭ ಸಿಕ್ಕುವ ಉದ್ಯೋಗವನ್ನಾಗಲಿ ಅಥವಾ ಸ್ಥಾನವನ್ನಾಗಲಿ ಸಂಪಾದಿಸಿಕೊಂಡರೆ; ಅಥವಾ

(d) ಸಾಕ್ಷಾತ್ತಾಗಿಯಾದರೂ ಅಥವಾ ಪರಭಾರೆಯಾಗಿಯಾದರೂ ತನ್ನಿಂದಾಗಲಿ ಅಥವಾ ತನ್ನ ಪಾಲುದಾರನಿಂದಾಗಲಿ ಬೋರ್ಡಿನೊಂದಿಗೆ ಅಥವಾ ಬೋರ್ಡಿನಪರವಾಗಿ ಯಾವ ಉದ್ಯೋಗದಲ್ಲಿಯಾದರು ಅಥವಾ ಯಾವ ಕಂಟ್ರಾಕ್ಟಿನಲ್ಲಿಯಾದರು ಹಿಸ್ಸೆಯೋ ಅಥವಾ ಪ್ರಯೋಜನವೋ, ಈ ಕೆಳಗೆ ಬರುವ ವಿದ್ಯಮಾನಗಳಲ್ಲಿ ಹೊರತು, ಉಂಟಾಗಿದ್ದರೆ:—

(i) ಸ್ಥಿರಸೊತ್ತಿನ ಪಟ್ಟೆ, ವಿಕ್ರಯ, ಬದಲಿಸೋಣ ಅಥವಾ ಕರೀದಿಗೆ ತೆಗದುಕೊಳ್ಳೋಣ ಅಥವಾ ಇದಕ್ಕಾಗಿ ಕರಾರು ಮಾಡೋಣ, ಅಥವಾ

(ii) ಬೋರ್ಡಿನೊಂದಿಗಾಗಲಿ, ಬೋರ್ಡಿನ ಪರವಾಗಿ ಆಗಲಿ, ಬೋರ್ಡಿನಿಂದಾಗಲಿ, ಕಂಟ್ರಾಕ್ಟು ಮಾಡುವ ಅಥವಾ ಕೆಲಸಕ್ಕೆ ಇಟ್ಟುಕೊಳ್ಳಲ್ಪಟ್ಟ ಯಾವ ಜಾಯಿಂಟ್ ಸ್ಟಾಕು ಕಂಪನಿ, ಅಥವಾ

(iii) ಎರಡು ಸಾವಿರ ರೂಪಾಯಿಗಳಿಗೆ ಅಧಿಕವಿಲ್ಲದ ಕ್ರಯವುಳ್ಳ ತಾನೆ ವ್ಯಾಪಾರ ಮಾಡುವ ಯಾವ ಪದಾರ್ಥವನ್ನಾದರು ಯಾವದೊಂದು ಸರ್ಕಾರಿ ಸಂವತ್ಸರದಲ್ಲಾಗಲಿ ಬೋರ್ಡಿಗೆ ಆಗಾಗ್ಯೆ ವಿಕ್ರಯಿಸುವದು: ಇಂಥಾವುಗಳಲ್ಲಿ ಬರೀ ಹಿಸ್ಸೆಯೋ ಅಥವಾ ಪ್ರಯೋಜನವೂ ಉಂಟಾಗಿರೋಣ ವಿನಹ; ಅಥವಾ

(e) ಅನುಕ್ರಮವಾದ 12 ತಿಂಗಳುಗಳಿಗೆ ಅಧಿಕವಾಗಿ ಬೋರ್ಡಿನ ಮೀಟಿಂಗುಗಳಿಗೆ ಬಾರದೆ ಇದ್ದರೆ ಅಥವಾ ಬರಲು ಅಶಕ್ತನಾಗಿದ್ದರೆ, ಅಥವಾ ಬೋರ್ಡಿನ ಅನುಮತಿಯಿಲ್ಲದೇನೆ ಬೋರ್ಡಿನ ಅನುಕ್ರಮವಾದ ಆರು ಸಾಧಾರಣ ಮೀಟಿಂಗುಗಳಿಗೆ ಬಾರದೆ ಇದ್ದರೆ; ಅಥವಾ

(*f*) ಇದರ ಮುಂದಿನ ಉಪಪ್ರಕರಣದ ನಿಯಮಗಳಿಗೆ ವಿರೋಧವಾಗಿ ಆಚರಿಸಿದರೆ ; ಅಥವಾ

(*g*) ಚುನಾಯಿಸಲ್ಪಟ್ಟ ಟ್ರಸ್ಟಿ ಆಗಿದ್ದು ಮ್ಯೂನಿಸಿಪಲ್ ಕಮ್ಮಿಷನರ ಉದ್ಯೋಗದಿಂದ ನಿವೃತ್ತಿ ಆದಕೂಡ್ಲೆ ಪುನಹ ಮ್ಯೂನಿಸಿಪಲ್ ಕಮ್ಮಿಷನರಾಗಿ ಚುನಾವು ಅಥವಾ ನೌಕರರಾಗದೆ ಇದ್ದರೆ ;—

ಟ್ರಸ್ಟಿಯು ಉದ್ಯೋಗವನ್ನು ಬಿಡತಕ್ಕದ್ದು ಮತ್ತು ಅವನ ಸ್ಥಾನವು ಖಾಲಿಯಾಗತಕ್ಕದ್ದು.

ಯಾವ ವಿಷಯಗಳಲ್ಲಿ ಟ್ರಸ್ಟಿಗಳು ಬಾಧ್ಯಪಡುತ್ತಾರೊ ಅವುಗಳನ್ನು ಕುರಿತು ವಿಚಾರ ಮಾಡಲು ಅಥವಾ ಸಮ್ಮತಿಕೊಡಲು ಅವರ ಅಧಿಕಾರಗಳಿಗೆ ನಿರ್ಬಂಧಗಳು.

(2) ಮೇಲಿನ (*d*) ಉಪಪ್ರಕರಣದ ಕೊನೆಯಲ್ಲಿ ವಿವರಿಸಿರುವ ಹಿಸ್ಸೆಯನ್ನೊ ಅಥವಾ ಬಾಧ್ಯತೆಯನ್ನೊ ಯಾವ ಟ್ರಸ್ಟಿಯು ಸಾಕ್ಷಾತ್ತಾಗಿ ಅಥವಾ ಪರಭಾರೆಯಾಗಿ ತನ್ನಿಂದಾಗಲಿ ಅಥವಾ ತನ್ನ ಹಿಸ್ಸೆದಾರರಿಂದಾಗಲಿ, ಅಥವಾ ತನ್ನ ವೃತ್ತಿ ಸಂಬಂಧದಿಂದ ತನ್ನ ಕಕ್ಷಿಗಾರರ ಪರವಾಗಿಯೊ ಅಥವಾ ಮತ್ತೊಬ್ಬ ಮನುಷ್ಯನ ನೌಕರಿಯಾರಾಗಿಯೊ ಯಾವ ವಿಷಯದಲ್ಲಿ ಉಂಟಾಗಿರುತ್ತಾನೆಯೊ, ಅಂಥ ವಿಷಯವಾಗಿ ಬೋರ್ಡಿನ ಅಥವಾ ಬೋರ್ಡಿನ ಕಮಿಟಿಯ ಯಾವ ಮೀಟಿಂಗುನಲ್ಲಿಯಾದರು ನಡಿಯುವ ವಾದದಲ್ಲಿ ಅಂಥ ಟ್ರಸ್ಟಿಯು ಭಾಗಿಯಾಗಕೂಡದು ಅಥವಾ ಸಮ್ಮತಿ ಕೊಡಕೂಡದು.

ಬೋರ್ಡಿನ ನಡವಳಿಕೆಗಳ ಸಮ್ಮಂಧವಾದ ನಿಯಮಗಳು.

9. ಬೋರ್ಡಿನ ನಡವಳಿಕೆಗಳ ಸಮ್ಮಂಧದಲ್ಲಿ ಈ ಕೆಳಗೆ ಬರುವ ನಿಯಮಗಳನ್ನ ಆಚರಿಸಬೇಕು, ಏನಂದರೆ :—

ಸ್ಥಳ ಖಾಲಿಯಾಗಿರೋಣ ನಡವಳಿಕೆಗಳಿಗೆ ಬಾಧಕವಲ್ಲ.

(1) ಬೋರ್ಡಿನಲ್ಲಿ ಯಾವದೊಂದು ಸ್ಥಳ ಖಾಲಿ ಇದ್ದಾಗ್ಯೂ ಉದ್ಯೋಗದಲ್ಲಿರುವ ಟ್ರಸ್ಟಿಗಳು ಅಂಥಾ ಖಾಲಿ ಸ್ಥಳವು ಖಾಲಿಯಾಗಿಲ್ಲವೆಂಬಂತೆ ತಮ್ಮ ನಡವಳಿಕೆಗಳನ್ನು ಚಲಾಯಿಸತಕ್ಕದ್ದು.

ಬೋರ್ಡು ಕೆಲಸ ನಡಿಸುವದಕ್ಕೋಸ್ಕರ ಕೂಡಬೇಕಾದ್ದು ಮತ್ತು ಏರ್ಪಾಟು ಮಾಡಬೇಕಾದ್ದು.

(2) ಬೋರ್ಡು ಒಟ್ಟುಸೇರಿ, ತಮ್ಮ ಮೀಟಿಂಗುಗಳ ಸ್ಥಳ, ದಿವಸ, ಘಂಟೆ, ನೋಟಿಸು, ನಡವಳಿಕೆಗಳ ಚಲಾವಣಿ, ಆ ಮೀಟಿಂಗುಗಳ ನಿಲಕಡೆ, ಮತ್ತು ಕೆಲಸ ನಡಿಸೋಣವನ್ನು ಕುರಿತು ಸಾಧಾರಣವಾಗಿ ತಮಗೆ ಯುಕ್ತವಾಗಿ ತೋರಿಬಂದಂತೆ, ಆಗಿಂದಾಗ್ಗೆ ಏರ್ಪಾಟುಗಳನ್ನು ಮಾಡಬೇಕು ; ಆದರೆ ಅಂಥಾ ಏರ್ಪಾಟುಗಳು ಈ ರೆಗ್ಯುಲೇಷನಿಗೆ ವಿರೋಧವಿಲ್ಲದಂತೆಯು ಮತ್ತು ಈ ಕೆಳಗೆ ಬರುವ ನಿಯಮಗಳಿಗೆ ಒಳಪಟ್ಟವುಗಳಾಗಿಯು ಇರತಕ್ಕದ್ದು, ಏನಂದರೆ :—

ತಿಂಗಳಿಗೆ ಒಂಧಾವರ್ತಿ ಒಂದು ಸಾಧಾರಣವಾದ ಮೀಟಿಂಗು ಆಗತಕ್ಕದ್ದು.

(*a*) ಪ್ರತಿ ಒಂದು ತಿಂಗಳಲ್ಲಿಯು ಕನಿಷ್ಠ ಪಕ್ಷದಲ್ಲಿ ಒಂದಾವರ್ತಿಯಾದರು ವಾಡಿಕೆಯಾದ ಮೀಟಿಂಗು ನಡಿಯತಕ್ಕದ್ದು.

ಅಥವಾ ಅಗತ್ಯವಿದ್ದಾಗ್ಗೆಲ್ಲಾ ಒಂದು ವಿಶೇಷ ಮೀಟಿಂಗು.

(*b*) ಛೇರಮೆನ್ನು ತಮಗೆ ಯುಕ್ತವಾಗಿ ತೋರಿಬಂದಾಗ್ಗೆಲ್ಲಾ ಒಂದು ವಿಶೇಷ ಮೀಟಿಂಗ್ ಉಂಟುಮಾಡಬಹುದು ; ಮತ್ತು ಮೂರಕ್ಕೆ ಕಮ್ಮಿ ಇಲ್ಲದ ಸಂಖ್ಯೆಯುಳ್ಳ ಟ್ರಸ್ಟಿಗಳು ಲಿಖಿತಮೂಲಕವಾಗಿ ಪ್ರಾರ್ಥಿಸಿದರೆ ಒಂದು ವಿಶೇಷ ಮೀಟಿಂಗ್ ಉಂಟುಮಾಡಬೇಕು.

ಒಂದು ಮೀಟಿಂಗ್ ನಡಿಸುವದಕ್ಕೆ ನಾಲ್ಕು ಟ್ರಸ್ಟಿಗಳು ಕೋರಂ (Quorum) ಆಗತಕ್ಕದ್ದು.

(*c*) ಯಾವ ಮೀಟಿಂಗ್‌ನಲ್ಲಿಯಾಗಲಿ ಆರಂಭದಿಂದ ಅಂತ್ಯದವರಿಗೂ ಕನಿಷ್ಠ ಪಕ್ಷದಲ್ಲಿ ನಾಲ್ಕು ಜನ ಟ್ರಸ್ಟಿಗಳು ಹಾಜರು ಇಲ್ಲದಿದ್ದರೆ, ಅಂಥಾ ಮೀಟಿಂಗ್‌ನಲ್ಲಿ ಯಾವ ಕೆಲಸವನ್ನೂ ಜರಿಗಿಸಕೂಡದು.

ಛೇರಮೆನ್ನು ಹಾಜರು ಆಗಿದ್ದರೆ, ಮೀಟಿಂಗಿನಲ್ಲಿ ಅಧ್ಯಕ್ಷನಾಗಿರತಕ್ಕದ್ದು.

(*d*) ಛೇರಮೆನ್ನು ಹಾಜರಾಗಿರುವ ಪ್ರತಿ ಒಂದು ಮೀಟಿಂಗಿನಲ್ಲಿಯು ಅವನೆ ಅಧ್ಯಕ್ಷನಾಗಿರಬೇಕು ; ಅವನ ಗೈರ್‌ಹಾಜರಿಯಲ್ಲಿ ಮೀಟಿಂಗಿನಲ್ಲಿ ಹಾಜರಿರುವ ಟ್ರಸ್ಟಿಗಳ ಪೈಕಿ ಯಾವಾತನು ಚುನಾಯಿಸಲ್ಪಡುತ್ತಾನೊ ಅವನು ಅಧ್ಯಕ್ಷನಾಗಬೇಕು ;

ಎಲ್ಲಾ ವಾದಗಳು ಹೆಚ್ಚಾಗಿರುವ ಅಭಿಪ್ರಾಯಗಳಂತೆ ತೀರ್ಮಾನವಾಗತಕ್ಕದ್ದು.

(*e*) ಮೀಟಿಂಗಿನಲ್ಲಿ ಹಾಜರಾಗಿರುವ ಟ್ರಸ್ಟಿಗಳ ಹೆಚ್ಚಾಗಿರುವ ಅಭಿಪ್ರಾಯಗಳಂತೆ ಎಲ್ಲಾ ವಾದಗಳು ತೀರ್ಮಾನವಾಗತಕ್ಕದ್ದು, ಮೀಟಿಂಗಿನಲ್ಲಿ ಅಭಿಪ್ರಾಯಗಳು ಸಮಭಾಗವಾದರೆ ಯಾವಕಡೆಗಾದರು ಹೆಚ್ಚು ಸಮ್ಮತಿ ಕೊಡೋಣವು ಪ್ರಸಿಡೆಂಟಿಗೆ ಸೇರತಕ್ಕದ್ದು ;

ಮಿನಿಟ್ಸ್‌ಗಳನ್ನು ಇಡತಕ್ಕದ್ದು.

(*f*) ಮೀಟಿಂಗಿನಲ್ಲಿ ಹಾಜರಾಗಿದ್ದ ಟ್ರಸ್ಟಿಗಳ ಹೆಸರುಗಳನ್ನು, ಪ್ರತಿ ಮೀಟಿಂಗಿನಲ್ಲಿಯು ನಡದ ನಡವಳಿಕೆಗಳನ್ನು ಈ ಉದ್ದೇಶಕ್ಕಾಗಿ ಇಡಲ್ಪಟ್ಟ ಒಂದು ಬುಕ್ಕಿನಲ್ಲಿ ರಿಕಾರ್ಡು ಮಾಡಿ ಆ ಬುಕ್ಕಿಗೆ ಅದಕ್ಕಾಚಿನ ಮೀಟಿಂಗಿನಲ್ಲಿ ಅಧ್ಯಕ್ಷರಾಗಿರುವವರು ರುಜು ಮಾಡಬೇಕು ; ಮತ್ತು ಕೆಲಸ ಮಾಡುವ ಕಾಲಗಳಲ್ಲಿ ಯಾವ ಟ್ರಸ್ಟಿ ಆಗಲಿ ಆ ಬುಕ್ಕನ್ನು ನೋಡಬಹುದು.

ಕಮ್ಮಿಟಿಗಳ ಏರ್ಪಾಟು.

(3) ಬೋರ್ಡು ಆಗಿಂದಾಗ್ಯೆ ಕಮ್ಮಿಟಿಗಳನ್ನು ಏರ್ಪಡಿಸಬಹುದು ; ಆ ಕಮ್ಮಿಟಿಗಳಿಗೆ ಚೇರಮೆನ್ನು ಮತ್ತು ಬೋರ್ಡಿನ ಅಭಿಪ್ರಾಯದಲ್ಲಿ ತಕ್ಕವರಾದ ಇತರ ಟ್ರಸ್ಟಿಗಳು ಮೆಂಬರುಗಳಾಗಿರಬೇಕು ; ಮತ್ತು ಬೋರ್ಡು

(*a*) ಈ ರೆಗ್ಯುಲೇಷನಿನ ಉದ್ದೇಶಗಳಿಗೆ ಸಮ್ಮಂಧಪಟ್ಟ ಯಾವ ವಿಷಯವನ್ನಾದರು ಕುರಿತು ವಿಚಾರಿಸಿ ರಿಪೋರ್ಟು ಮಾಡೋಣವನ್ನು ಆ ಕಮ್ಮಿಟಿಗಳಿಗೆ ಒಪ್ಪಿಸಬಹುದು, ಅಥವಾ

(*b*) 39, (1)ನೆ ಪ್ರಕರಣದ (a) ಕಲಮಿನಂತೆ ಮಾಡಿರುವ ಯಾವ ಒಳ ನಿಬಂಧನೆ (By-laws) ಗಳಿಗಾಗಲಿ ಒಳಪಟ್ಟು, ಮತ್ತು ಈ ಪರದಲ್ಲಿ ಒಂದು ಪ್ರತ್ಯೇಕ ತೀರ್ಮಾನ (Resolution) ಮಾಡಿ, ತಮ್ಮ ಅಧಿಕಾರಗಳ ಅಥವಾ ಕರ್ತವ್ಯಗಳ ಯಾವ ಅಂಶವನ್ನಾದರು ಆ ಕಮ್ಮಿಟಿಗಳಿಗೆ ವಹಿಸಿ ಕೊಡಬಹುದು.

ಹೀಗೆ ಏರ್ಪಟ್ಟ ಯಾವ ಕಮ್ಮಿಟಿಯಾಗಲಿ ಆಗಿಂದಾಗ್ಯೆ ಬೋರ್ಡಿನಿಂದ ಕೊಡಲ್ಪಡಬಹುದಾದ ಅಪ್ಪಣೆಗಳಂತೆ ನಡಿಯತಕ್ಕದ್ದು, ಮತ್ತು ಬೋರ್ಡು ಆಗಿಂದಾಗ್ಯೆ ಅಂಥಾ ಕಮ್ಮಿಟಿಯ ಏರ್ಪಾಟನ್ನು ಬದಲಾಯಿಸಬಹುದು ಅಥವಾ ತೆಗದು ಹಾಕಬಹುದು. ಪ್ರತಿಯೊಂದಂಥಾ ಕಮ್ಮಿಟಿಗೆ ಚೇರಮೆನ್ನು ಅಧ್ಯಕ್ಷನಾಗಿರತಕ್ಕದ್ದು.

ನೇಮಲೋಪಗಳಿಂದ ಬೋರ್ಡಿನನಡವಳಿಕೆ ಮುಂತಾದವುಗಳು ರದ್ದಾಗತಕ್ಕದ್ದಲ್ಲ.

(4) ಬೋರ್ಡನ್ನಾಗಲಿ, ಕಮ್ಮಿಟಿಯನ್ನಾಗಲಿ, ಅಥವಾ ಟ್ರಸ್ಟಿಯನ್ನಾಗಲಿ ನೇಮಿಸುವದರಲ್ಲಿ ಸ್ವಲ್ಪ ನ್ಯೂನತೆ ಇರುವದೊಂದೇಕಾರಣಕ್ಕಾದರೂ, ಅಥವಾ, ಅವರು, ಯ, ಅವರ ಪೈಕಿ ಯಾರೊಬ್ಬರು ಟ್ರಸ್ಟಿಯು ಸ್ಥಾನಕ್ಕೆ ಅನರ್ಹರಾಗಿರುವ ಕಾರಣಕ್ಕಾಗಲಿ, ಬೋರ್ಡಿನಿಂದಲೋ, ಅಥವಾ ಯಾವ ಕಮ್ಮಿಟಿಯಿಂದಲೋ, ಅಥವಾ ಟ್ರಸ್ಟಿಯಾಗಿ ನಡಿಯುವ ಯಾವ ಮನುಷ್ಯನಿಂದಲೊ ಆಗಿರುವ ಯಾವ ಕಾರ್ಯವೂ ರದ್ದೆಂತ ಭಾವಿಸಕೂಡದು.

ಸಾವಿರ ರೂಪಾಯಿಗಳಿಗೆ ಅಧಿಕವಲ್ಲದ ಮೊಬಲಗಿನ ಗುತ್ತಿಗೆಗಳನ್ನು ನೆರವೇರಿಸುವ ವಿಧಾನ.

10. (1) ಸಾವಿರ ರೂಪಾಯಿಗಳಿಗೆ ಹೆಚ್ಚಲ್ಲದ ಯಾವ ಗುತ್ತಿಗೆ ಅಥವಾ ಕರಾರನ್ನಾಗಲಿ, ಬೋರ್ಡಿನ ಪರವಾಗಿ, ಚೇರಮೆನ್ನು ಮಾಡಬಹುದು. ಅಂಥ ಗುತ್ತಿಗೆಯ ಅಥವಾ ಕರಾರಿನ ವಿಧಾನ ಮತ್ತು ಮಾದ್ರಿಯು, ಆ ಗುತ್ತಿಗೆ ಅಥವಾ ಕರಾರು, ತನ್ನ ಪರವಾಗಿಯೇ ನಡದಿದ್ದರೆ ಹ್ಯಾಗೆ ತತ್ಕಾಲದಲ್ಲಿ ಜಾರಿ ಇರುವ ನಿಬಂಧನೆಯಂತೆ ತನಗೆ ಬದ್ಧಕವಾಗಿರಬಹುದೊ ಹಾಗೆ ಇರತಕ್ಕದ್ದು. ಪ್ರತಿಯೊಂದಂಥ ಗುತ್ತಿಗೆ ಅಥವಾ ಕರಾರನ್ನ ಬೋರ್ಡಿನ ಮಾರಣೆ ವಾಡಿಕೆಯಾದ ಮೀಟಿಂಗಿನಲ್ಲಿ ರಿಪೋರ್ಟು ಮಾಡಬೇಕು.

ಸಾವಿರ ರೂಪಾಯಿಗಳಿಗೆ ಅಧಿಕವಾದ ಮೊ[illegible]ರೆ.

(2) ಬೋರ್ಡಿನಪರವಾಗಿ ನಡಿಯುವ ಪ್ರತಿಯೊಂದಿತರ ಗುತ್ತಿಗೆ ಅಥವಾ ಕರಾರು ಬೋರ್ಡಿನ ಪೂರ್ವ ಭಾವಿಯಾದ ಅನುಮತಿಯೊಡನೆ ಲಿಖಿತಮೂಲಕವಾಗಿರಬೇಕಲ್ಲದೆ, ಚೇರಮೆನ್ನನ ಮತ್ತು ಇಬ್ಬರು ಇತರ ಟ್ರಸ್ಟಿಗಳ ರುಜುಗಳೊಂದಿಗೂ ಹಿಂದೆ ನೇಮಿಸಲ್ಪಟ್ಟಂತೆ ಇರುವ ಬೋರ್ಡಿನ ಸಾಮಾನ್ಯವಾದ ಮೊಹರಿನಿಂದ ಮೊಹರು ಮಾಡಲ್ಪಟ್ಟದ್ದಾಗಿಯು ಇರಬೇಕು. ಇದರಲ್ಲಿ ನೇಮಿಸಿರುವಂತೆ ನೆರವೇರಿಸಲ್ಪಟ್ಟಿದ್ದಹೊರ್ತು, ಈ ಉಪ ಪ್ರಕರಣದಲ್ಲಿ ಸೂಚಿಸಿರುವ ಯಾವ ಗುತ್ತಿಗೆ ಅಥವಾ ಕರಾರು ಕೂಡ ಬೋರ್ಡಿಗೆ ಬದ್ಧಕವಾಗಿರುವದಿಲ್ಲ.

ಸಾಮಾನ್ಯ ಮೊಹರಿನ ಸಂರಕ್ಷಣೆ ಮತ್ತು ಉಪಯೋಗ.

(3) ಬೋರ್ಡಿನ ಸಾಮಾನ್ಯ ಮೊಹರು ಚೇರಮೆನ್ನಿನ ಸ್ವಾಧೀನದಲ್ಲಿರತಕ್ಕದ್ದು. ಯಾವ ಗುತ್ತಿಗೆ ಅಥವಾ ದಸ್ತಾವೇಜಿಗಾಗಲಿ, ಇಬ್ಬರು ಟ್ರಸ್ಟಿಗಳ ಸಮುಕ್ಷಮದಲ್ಲಿ ಹೊರ್ತು, ಆ ಮೊಹರನ್ನ ಹಾಕಕೂಡದು. ಆ ಗುತ್ತಿಗೆ ಅಥವಾ ದಸ್ತಾವೇಜು ತಮ್ಮ ಸಮುಕ್ಷಮದಲ್ಲಿ ಮೊಹರು ಮಾಡಲ್ಪಟ್ಟಿತೆಂಬುವದಕ್ಕೆ ಗುರುತಾಗಿ ಅವರು ಅವುಗಳಿಗೆ ರುಜು ಮಾಡಬೇಕು. ಯಾವದೊಂದಂಥಾ ಗುತ್ತಿಗೆ ಅಥವಾ ದಸ್ತಾವೇಜು ಬರೆಸಿದ್ದಕ್ಕೆ ಆದ ಸಾಕ್ಷಿಗಳ ರುಜುವುಗಳಿಗೆ ಭೇದ ತೋರಿಸುವಂತೆ ಸದರಿ ಟ್ರಸ್ಟಿಗಳ ರುಜುವುಗಳು ಇರತಕ್ಕದ್ದು.

ಬೋರ್ಡು ಅನ್ಯರ ಮೇಲಿರುವ ತಮ್ಮ ಹಕ್ಕುಗಳನ್ನು ಅಥವಾ ತಮ್ಮ ಮೇಲಿರುವ ಅನ್ಯರ ಹಕ್ಕುಗಳನ್ನು ರಾಜಿ ಮಾಡಿಕೊಳ್ಳಬಹುದು.

11. ಈ ರೆಗ್ಯುಲೇಷನಿನಂತೆ ಮಾಡಿದ ಯಾವ ಗುತ್ತಿಗೆಯಿಂದಾಗಲಿ ಉಂಟಾಗಿರುವ ಯಾವ ಹಕ್ಕು ಅಥವಾ ಬಾಧ್ಯತೆ ಇದರ ಸಮ್ಮಂಧದಲ್ಲಿಯಾದರೂ, ಅಥವಾ, ತಮ್ಮಮೇಲೆ ಅನ್ಯರು ಅಥವಾ ಅನ್ಯರ ಮೇಲೆ ತಾವು ಮಾಡಿರುವ ಯಾವ ದಾವೆಯ ಸಮ್ಮಂಧದಲ್ಲಿಯಾದರು, ತಾವು ಸಾಕೆಂದು ನೆನಿಸುವಷ್ಟು ಮೊಬಲಗಿಗೊ ಅಥವಾ ಪ್ರತಿಫಲಕ್ಕೊ, ಬೋರ್ಡು ರಾಜಿ ಮಾಡಿಕೊಳ್ಳಬಹುದು.

12. ಚೇರಮೆನ್ನು —

ಚೇರಮೆನ್ನಿನ ಕರ್ತವ್ಯಗಳು.

(1) ಆಲಸ್ಯದಿಂದಾಗಲಿ ಅಥವಾ ಇತರ ನ್ಯಾಯವಾದ ಕಾರಣದಿಂದಾಗಲಿ ಅಡ್ಡಿ ಮಾಡಲ್ಪಟ್ಟದ್ದ ಹೊರ್ತು, ಪ್ರತಿ ಒಂದು ಮೀಟಿಂಗಿನಲ್ಲಿಯು ಹಾಜರಿರಬೇಕು;

(2) ಬೋರ್ಡಿನ ತೀರ್ಮಾನಗಳನ್ನು ಜಾರಿಯಲ್ಲಿ ತರಬೇಕು ;

(3) ಬೋರ್ಡಿನ ಉತ್ತರ ಪ್ರತ್ಯುತ್ತರಗಳನ್ನು ಇಟ್ಟು ನಡಿಸಬೇಕು ;

(4) ಬೋರ್ಡಿನ ಆಡಳಿತಗಳ ಸಂಗತಿಗಳಲ್ಲಿಯು ಮತ್ತು ಬೋರ್ಡಿನ ಲೆಕ್ಕಗಳು ಮತ್ತು ರಿಕಾರ್ಡುಗಳು ಇವುಗಳ ಸಂಗತಿಗಳಲ್ಲಿಯು, ಬೋರ್ಡಿನ ಉದ್ಯೋಗಸ್ಥರ ಮತ್ತು ಸೇವಕರ ಕೆಲಸ ಕಾರ್ಯಗಳ ಮೇಲ್ವಿಚಾರಣೆ ಮಾಡಬೇಕು ; ಮತ್ತು, 35 (1)ನೆ ಪ್ರಕರಣದಲ್ಲಿ ವಿಶೇಷಿಸಿರುವ ಮಟ್ಟಿಗೆ, ಅಂಥ ಉದ್ಯೋಗಸ್ಥರ ಮತ್ತು ಸೇವಕರ ಕೆಲಸ, ಅವರ ಸಂಬಳ, ವಿಶೇಷ ಹಕ್ಕುಗಳು, ಮತ್ತು ಅಲವರ್ಸುಗಳು, ಇವುಗಳಿಗೆ ಸಮ್ಮಂಧಪಟ್ಟ ಎಲ್ಲಾ ವಿಷಯುಗಳನ್ನು ಫೈಸಲು ಮಾಡಬೇಕು ;

(5) ಬೋರ್ಡಿನ ನಡವಳಿಕೆಗಳ ರಿಕಾರ್ಡಿನ ಒಂದು ನಕಲನ್ನು ಮತ್ತು ಆಗಿಂದಾಗ್ಯೆ ಗವರ್ರ್ನಮೆಂಟಿನವರು ಅಪೇಕ್ಷಿಸಬಹುದಾದ ಹಕೀಕತನಾಮೆಗಳು (Returns) ಅಥವಾ ಇತರ ವರ್ತಮಾನವನ್ನು ಗವರ್ರ್ನಮೆಂಟಿಗೆ ಹೊಂದಿಸಿ ಕೊಡಬೇಕು.

ಬದಲಿ ಚೇರಮೆನ್ನನ್ನು ನೇಮಿಸುವದು.

13. ಚೇರಮೆನ್ನಿನ ಯಾವ ಗೈರು ಹಾಜರಿಯಲ್ಲಾಗಲಿ ಗವರ್ರ್ನಮೆಂಟಿನವರು ಮತ್ತೊಬ್ಬ ಮನುಷ್ಯನನ್ನು ಬದಲಿ ಚೇರಮೆನ್ನಾಗಿ ನೊಕರರು ಮಾಡಬಹುದು, ಮತ್ತು ಹಾಗೆ ನೊಕರರಾದ ಮನುಷ್ಯನು, ಯಾವ ಮನುಷ್ಯನಿಗೆ ಬದಲಿಯಾಗಿ ತಾನು ನೇಮಿಸಲ್ಪಟ್ಟಿದ್ದಾನೊ ಆ ಮನುಷ್ಯನಿಗೆ ಈ ರೆಗ್ಯುಲೇಷನಿನಂತೆ ಕೊಡಲ್ಪಟ್ಟ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು, ತಾನು ಆಚರಿಸುವದಲ್ಲದೆ, ಸದರಿ ಮನುಷ್ಯನು ಯಾವ ಜವಾಬ್ದಾರಿಗಳಿಗು, ನಿರ್ಬಂಧಗಳಿಗು, ಮತ್ತು ಷರತ್ತುಗಳಿಗು ಒಳಪಟ್ಟು ಇರುತ್ತಾನೆಯೊ, ಅವುಗಳಿಗೆಲ್ಲ ತಾನೂ ಒಳಪಟ್ಟಿರಬೇಕು.

III ನೆ ಅಧ್ಯಾಯ.

ಕರ್ತವ್ಯಗಳು ಮತ್ತು ಅಧಿಕಾರಗಳು.

ಉತ್ತಮ ಪಡಿಸುವ ಉಪಾಯಗಳು.

ಗವರ್ರ್ನಮೆಂಟಿನವರು ಮಾಡಿದ ನೇಮಕಗಳ ಆಧಾರದಮೇಲೆ ಬೋರ್ಡು ಉತ್ತಮ ಪಡಿಸುವ ಉಪಾಯಗಳನ್ನು ಮಾಡಬೇಕು.

14. (1) ಇಂಪ್ರುವ್‌ಮೆಂಟ್ ಕಮ್ಮಿಟಿಯವರು ಅನುಮೋದಿಸುವಂತೆಯಾಗಲಿ ಅಥವಾ ಇತರ ವಿಧದಲ್ಲಾಗಲಿ ಗವರ್ರ್ನಮೆಂಟಿನವರು ಕೊಟ್ಟಿರುವ ಅಥವಾ ಇನ್ನು ಮುಂದೆ ಕೊಡಬಹುದಾದ ನೇಮಕಗಳಿಗೆ ತಕ್ಕ ಮಟ್ಟಿಗೆ ದೃಷ್ಟಿ ಕೊಟ್ಟು ಮತ್ತು ಆ ನೇಮಕಗಳ ಆಧಾರದ ಮೇಲೆ, ಪಟ್ಣದ ಅನೇಕ ಭಾಗಗಳನ್ನು ಉತ್ತಮಪಡಿಸುವದಕ್ಕಾಗಿಯೂ ಅಥವಾ ಅಭಿವೃದ್ಧಿ ಪಡಿಸುವದಕ್ಕಾಗಿಯೂ ಅಥವಾ ಇವೆರಡು ಉದ್ದೇಶಗಳಿಗೋಸ್ಕರವಾದರು, ಬೋರ್ಡು, ಈ ರೆಗ್ಯುಲೇಷನಿನಂತೆ ಏರ್ಪಟ್ಟ ಬಳಿಕ, ಸಾಧ್ಯವಾದಷ್ಟು ತ್ವರೆಯಾಗಿ, (ಇದರಲ್ಲಿ ಮುಂದೆ ಇಂಪ್ರುವ್‌ಮೆಂಟ್‌ಸ್ಕೀಂಸ — ಉತ್ತಮ ಪಡಿಸುವ ಉಪಾಯಗಳು ಎಂದು ಸೂಚಿಸಲ್ಪಡುವ) ಉಪಾಯಗಳನ್ನು ವಿವರವಾಗಿ ತಯಾರ್ಮಾಡಬೇಕು.

ಅಗತ್ಯ ಬಿದ್ದಾಗ ಅಧಿಕವಾದ ಉಪಾಯಗಳನ್ನು ಮಾಡಬಹುದು.

(2) ಬೋರ್ಡು, ಆಗಿಂದಾಗ್ಗೆ ಮತ್ತು ತಮ್ಮ ದ್ರವ್ಯಾನುಕೂಲತೆಯು ಬೇಕಾದ ಮಟ್ಟಿಗೆ ಇದೆ ಎಂಬ ನಂಬಿಕೆ ಉಂಟಾಗಿರುವ ಪಕ್ಷದಲ್ಲಿ, ತಾವು [illegible]ವೆಂದು ಎಣಿಸಬಹುದಾದ ಯಾವ ಹೆಚ್ಚಾದ ಉತ್ತಮ ಪಡಿಸುವ ಉಪಾಯಗಳನ್ನಾದರು ಮಾಡಬಹುದು.

ಉತ್ತಮ ಪಡಿಸುವ ಉಪಾಯದಲ್ಲಿ ಇರಬೇಕಾದ ವಿವರಗಳು.

15. 14ನೆ ಪ್ರಕರಣದಂತಾದ ಪ್ರತಿ ಒಂದು ಉತ್ತಮ ಪಡಿಸುವ ಉಪಾಯವು ಹ್ಯಾಗಿರಬೇಕೆಂದರೆ—

(1) ಆ ಉಪಾಯದಲ್ಲಿ ಅಡಗಿರುವ ಸ್ಥಳದ ಹದ್ದುಗಳೊಳಗೆ ಇದರಡಿ ಬರುವ ವಿದ್ಯಮಾನಗಳನ್ನು ಆಗಗೊಡಿಸತಕ್ಕದ್ದಾಗಿರಬೇಕು :—

(*a*) ಬೋರ್ಡಿನ ಅಭಿಪ್ರಾಯದಲ್ಲಿ ಯಾವ ಭೂಮಿಯು ಆ ಉಪಾಯದ ನೆರವೇರಿಕೆಯಿಂದ ಬದಲಾವಣೆಗೆ ಒಳಪಡುತ್ತದೊ, ಅಥವಾ ಆ ಉಪಾಯದ ನೆರವೇರಿಕೆಗೋಸ್ಕರ ಬೇಕಾಗುತ್ತದೊ, ಅಂಥಾ ಭೂಮಿಯ ಸಂಪಾದ್ಯ,

(*b*) ಯಾವ ಭೂಮಿಯನ್ನಾಗಲಿ ಅಥವಾ ಎಲ್ಲಾ ಭೂಮಿಯನ್ನಾಗಲಿ ಪುನಹ ಮರಿಸೆಯಾಗಿಟ್ಟು ಸರಿಮಾಡುವದಲ್ಲದೆ ಕಟ್ಟಡಗಳನ್ನು ಹೊಸದಾಗಿ ಮತ್ತು ಪುನಹ ಉಂಟುಮಾಡೋಣ ಮತ್ತು ಬೀದಿಗಳನ್ನು ಕಟ್ಟೋಣ ಮತ್ತು ಬದಲಾಯ್ಸಿಸೋಣ,

(*c*) ಹಾಗೆ ಕಟ್ಟಲ್ಪಟ್ಟ ಅಥವಾ ಬದಲಾಯಿಸಲ್ಪಟ್ಟ ಬೀದಿಗಳಲ್ಲಿ ನೀರು ಹರಿಯುವ ಬಚ್ಚಲುಗಳನ್ನು ಕಟ್ಟೋಣ ಮತ್ತು ಬೆಳಕು ಮಾಡೋಣ ;

(2) ಸದರಿ ಹದ್ದುಗಳೊಳಗೆ ಇದರಡಿಬರುವ ವಿದ್ಯಮಾನಗಳನ್ನು ಆಗಗೊಡಿಸತಕ್ಕದ್ದಾಗಿರಬಹುದು ;

(*a*) ಆ ಪ್ರದೇಶದಲ್ಲಿ ನೀರು ಹರಿಯುವದನ್ನು ಉತ್ತಮ ಪಡಿಸುವದಕ್ಕೋಸ್ಕರ ಯಾವ ಭೂಮಿಯನ್ನಾಗಲಿ ಎತ್ತರಿಸುವದು ಯುಕ್ತವೆಂದು ಬೋರ್ಡು ಎಣಿಸುವ ಪಕ್ಷದಲ್ಲಿ ಅಂಥಾ ಭೂಮಿಯನ್ನು ಎತ್ತರಿಸೋಣ,

(*b*) ಆ ಉಪಾಯದಲ್ಲಡಗಿರುವ ಸ್ಥಳದಲ್ಲಾಗಲಿ ಅಥವಾ ಅದಕ್ಕೆ ತಗಲಿರುವ ಸ್ಥಳದಲ್ಲಾಗಲಿ ಗಾಳಿ ಆಡುವದನ್ನು ಉತ್ತಮ ಪಡಿಸುವದಕ್ಕೋಸ್ಕರ ಬೈಲು ಭೂಮಿಯನ್ನು ಬಿಡೋಣ,

(*c*) ಬೇಕಾಗಿರುವ ಆರೋಗ್ಯ ರಕ್ಷಣಸಮ್ಮಂಧವಾದ ಏರ್ಪಾಟುಗಳಲ್ಲವಾಗಲಿ ಅಥವಾ ಅವುಗಳ ಯಾವ ಭಾಗವೆ ಆಗಲಿ,

(*d*) ಮಾರ್ಕೆಟ್ಟುಗಳು ಮತ್ತು ಇತರ ಸಾರ್ವಜನಿಕ ಅಗತ್ಯಗಳು ಅಥವಾ ಅನುಕೂಲಗಳು ಇವುಗಳನ್ನು ಸ್ಥಾಪಿಸೋಣ ಅಥವಾ ಏರ್ಪಡಿಸೋಣ; ಮತ್ತು

(3) ಸದರಿ ಹದ್ದುಗಳೊಳಗಾಗಲಿ ಅಥವಾ ಹೊರಗಾಗಲಿ, ಬಡವರಾದ ಮತ್ತು ಕೂಲಿ ಮಾಡುವ ಜನಗಳಿಗೂ, ಆ ಉಪಾಯವನ್ನು ನೆರವೇರಿಸುವವರಲ್ಲಿ ಸ್ಥಳ ತಪ್ಪಿಸಲ್ಪಡಬೇಕಾದ ಬಡ ಮತ್ತು ಕೂಲಿಜನರೆಲ್ಲರಿಗೂ ಅಥವಾ ಕೆಲವರಿಗೂ, ವಾಸ ಮಾಡುವದಕ್ಕೋಸ್ಕರ ಕಟ್ಟಡಗಳನ್ನು ಏರ್ಪಡಿಸೋಣ; ಇದನ್ನು ಆಗಗೊಡಿಸತಕ್ಕದ್ದಾಗಿರಬಹುದು. ಅಂಥಾ ಕಟ್ಟಡಗಳಲ್ಲಿ ಅಂಗಡಿಗಳು ಅಡಗಿರುವದಾಗಿ ಎಣಿಸತಕ್ಕದ್ದು.

ಉಪಾಯವು ಸಂಪೂರ್ಣವಾದ ನಂತರ ನಡಿಯಬೇಕಾದ ರೀತಿ.

16. (1) ಒಂದು ಉತ್ತಮ ಪಡಿಸುವ ಉಪಾಯ ಮುಗಿದ ನಂತರ, ಬೋರ್ಡು, ಒಂದು ಇಸ್ತಿಹಾರನ್ನು ತಯಾರ್ಮಾಡಬೇಕು; ಆ ಇಸ್ತಿಹಾರಿನಲ್ಲಿ ಯಾವದಾದರು ಒಂದು ಉಪಾಯವಮಾಡಿರೋಣವನ್ನು ಮತ್ತು ಅದರಲ್ಲಡಗಿರುವ ಪ್ರದೇಶದ ಹದ್ದುಗಳನ್ನು ತಿಳಿಸುವವಲ್ಲದೆ, ಆ ಉಪಾಯದ ವಿವರಗಳು ಅದರಲ್ಲಡಗಿರುವ ಪ್ರದೇಶದ ವ್ಯಾಪು ಮತ್ತು ಸಂಪಾದಿಸಬೇಕೆಂದು ನಿಶ್ಚಯಿಸಿರುವ ಭೂಮಿಯ ವಿವರ ಇವುಗಳನ್ನು ಸರಿಯಾದ ಕಾಲಗಳಲ್ಲಿ ಎಲ್ಲಾ ನೋಡಬಹುದಾದ ಒಂದು ಸ್ಥಳವನ್ನು ನಮೂದು ಮಾಡಿರಬೇಕು; ಮತ್ತು

ಉಪಾಯದ ಇಸ್ತಿಹಾರಿನ ನಕಲನ್ನು ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರಿಗು ಕಳುಹಿಸಬೇಕು.

(*a*) ಅಂಥಾ ಇಸ್ತಿಹಾರಿನ ಒಂದು ನಕಲನ್ನು ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರಿಗೆ ಕಳುಹಿಸತಕ್ಕದ್ದು, ಆ ಪ್ರೆಸಿಡೆಂಟರು, ಸದರಿ ಇಸ್ತಿಹಾರು ತಮಗೆ ಮುಟ್ಟಿದ ತಾರೀಕಿನಿಂದ ಮೂವತ್ತು ದಿವಸಗಳೊಳಗಾಗಿ ಮ್ಯುನಿಸಿಪಲ್ ಕಮ್ಮಿಷನರುಗಳು ಆ ಉಪಾಯವನ್ನು ಕುರಿತು ಏನನ್ನು ತಿಳಿಸತಕ್ಕದ್ದುಚಿತವೆಂದು ಎಣಿಸಬಹುದೊ ಅದನ್ನು ಗವರ್ನಮೆಂಟಿನವರಿಗೆ ಸಮರ್ಪಿಸುವದಕ್ಕೋಸ್ಕರ ಬೋರ್ಡಿಗೆ ಕಳುಹಿಸಬೇಕು;

ಇಸ್ತಿಹಾರನ್ನು ಪ್ರಕಟಣೆ ಮಾಡೋಣ.

(*b*) ಬೋರ್ಡು, ಸದರಿ ಇಸ್ತಿಹಾರಿನ ಒಂದು ನಕಲನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಅನುಕ್ರಮವಾಗಿ ಮೂರು ವಾರಗಳ ಪರ್ಯಂತರ ಛಾಪಿಸಬೇಕಲ್ಲದೆ, ತಮ್ಮ ಕಚೇರಿಯೊಳಗೆ ದೃಷ್ಟಿಗೋಚರವಾದ ಪ್ರದೇಶದಲ್ಲಿಯೂ, ಡೆಪ್ಯುಟಿ ಕಮ್ಮಿಷನರವರ ಕಚೇರಿಯಲ್ಲಿಯೂ, ಮ್ಯುನಿಸಿಪಲ್ ಕಮ್ಮಿಷನಿನ ಕಚೇರಿಯಲ್ಲಿಯೂ ಮತ್ತು ಬೋರ್ಡು ಅಗತ್ಯವೆಂದು ಎಣಿಸಬಹುದಾದ ಇತರ ಸ್ಥಳಗಳಲ್ಲಿಯೂ ಹಚ್ಚಿಸಬೇಕು.

ಉಪಾಯವನ್ನು ಜಾರಿ ತರೋಣದರಲ್ಲಿ ಸಂಪಾದಿಸಬೇಕಾದ ಸ್ವತ್ತಿನ ಮಾಲೀಕರಿಗೆ ನೋಟೀಸುಗಳನ್ನು ಜಾರಿ.

(2) ಸರ್ಕಾರಿ ಗೆಜೆಟ್ಟಿನಲ್ಲಿ ಸದರಿ ಇಸ್ತಿಹಾರು ಛಾಪಿಸಲ್ಪಟ್ಟ ಮೊದಲನೆ ದಿನದಿಂದ ಮುವ್ವತ್ತು ದಿವಸಗಳೊಳಗಾಗಿ ಬೋರ್ಡು, ಉತ್ತಮ ಪಡಿಸುವ ಉದ್ದೇಶಕ್ಕೋಸ್ಕರ ಸಂಪಾದಿಸತಕ್ಕದ್ದೆಂದು ಎಣಿಸಲ್ಪಟ್ಟಿರುವ ಯಾವ ಕಟ್ಟಡದ ಅಥವಾ ಭೂಮಿಯ ಮೇಲೆ, ಮ್ಯುನಿಸಿಪಲ್ ರೆಗ್ಯುಲೇಷನಗಳಂತೆ ಸ್ವತ್ತು ತೆರಿಗೆಗಳನ್ನೂ ಅಥವಾ ಲ್ಯಾಂಡು ರೆವಿನ್ಯೂ ಕೋಡಿನಂತೆ ನೆಲ ಕಂದಾಯವನ್ನೂ ಕೊಡಬೇಕಾದ ಮುಖ್ಯ ಜವಾಬ್ದಾರಿಯುಳ್ಳವನೆಂದು, ಯಾವ ಮನುಷ್ಯನ ಹೆಸರು ಮ್ಯುನಿಸಿಪಲ್ ತೆರಿಗೆ ಬುಕ್ಕಿನಲ್ಲಿಯಾಗಲಿ ಅಥವಾ ಲ್ಯಾಂಡ್ ರೆವಿನ್ಯು ರಿಜಸ್ಟರಗಳಲ್ಲಿಯಾಗಲಿ ನಮೂದಾಗಿರುತ್ತೊ, ಆ ಮನುಷ್ಯನಿಗೆ ಒಂದು ನೋಟೀಸನ್ನು ಜಾರಿ ಮಾಡತಕ್ಕದ್ದು. ಆ ನೋಟೀಸಿನಲ್ಲಿ, ಉತ್ತಮ ಪಡಿಸುವ ಉಪಾಯದ ನೆರವೇರಿಕೆಗೋಸ್ಕರ ಅಂಥಾ ಭೂಮಿ ಅಥವಾ ಕಟ್ಟಡ ಸಂಪಾದಿಸಲು ಬೋರ್ಡು ನಿಶ್ಚಯಿಸಿರೋಣವನ್ನು ವ್ಯಕ್ತಪಡಿಸಬೇಕು, ಮತ್ತು ಆ ಭೂಮಿಯ ಅಥವಾ ಕಟ್ಟಡದ ಸಂಪಾದನೆಗೆ ಸದರಿ ಮನುಷ್ಯನು ಸಮ್ಮತಿಸುತ್ತಾನೆಯೊ ಇಲ್ಲವೊ, ಸಮ್ಮತಿಸದಿದ್ದರೆ ಅದರ ಕಾರಣಗಳು—ಇದನ್ನೆಲ್ಲಾ ನೋಟೀಸು ಜಾರಿಯಾದ ಮುವ್ವತ್ತು ದಿನಗಳೊಳಗಾಗಿ ವಿವರಿಸಿ ಜವಾಬು ಕೊಡಬೇಕೆಂದು ಆ ಮನುಷ್ಯನಿಗೆ ತಾಕೀದು ಮಾಡಬೇಕು.

ನೋಟೀಸ್ ಜಾರಿಯ ಕ್ರಮ.

(3) ಅಂಥಾ ನೋಟೀಸು ಚೇರಮ್ಯಾನಿನ ರುಜುವಿನಿಂದಾಗಲಿ ಅಥವಾ ಅವನ ಹುಕುಮಿನಿಂದಾಗಲಿ ಇರಬೇಕು;

(*a*) ಮತ್ತು ಆ ನೋಟೀಸನ್ನು ಯಾವ ಮನುಷ್ಯನಿಗೆ ಜಾರಿ ಆಗತಕ್ಕದ್ದೊ ಅವನಿಗೆ ಖುದ್ದಾಗಿ ಕೈಯಲ್ಲಿ ಕೊಡಬೇಕು; ಆ ಮನುಷ್ಯನು ಇಲ್ಲದಿದ್ದರೆ ಯಾ ಸಿಕ್ಕದೇ ಹೋದರೆ ಅವನ ಏಜಂಟಿಗೆ ಖುದ್ದಾಗಿ ಕೊಡಬೇಕು ಅಥವಾ ಅವನ ಏಜಂಟು ಸಿಕ್ಕದೆ ಇರುವ ಪಕ್ಷದಲ್ಲಿ ಆ ಭೂಮಿಗಾಗಲಿ ಅಥವಾ ಕಟ್ಟಡಕ್ಕಾಗಲಿ ಹಚ್ಚಬೇಕು; ಅಥವಾ

(*b*) ಅಂಥಾ ಮನುಷ್ಯನ ವಾಡಿಕೆಯಾದ ಅಥವಾ ಕಡೇಸಾರಿ ತಿಳಿಯಬಂದ ನಿವಾಸಸ್ಥಾನದಲ್ಲಿಯಾಗಲಿ ಅಥವಾ ಅವನು ಕೆಲಸ ಮಾಡತಕ್ಕ ಸ್ಥಳದಲ್ಲಿಯಾಗಲಿ ಆ ನೋಟೀಸನ್ನು ಕೊಡಬೇಕು; ಅಥವಾ

(*c*) ಅಂಥಾ ಮನುಷ್ಯನ ವಾಡಿಕೆಯಾದ ಅಥವಾ ಕಡೇಸಾರಿ ತಿಳಿಯಬಂದ ನಿವಾಸಸ್ಥಾನಕ್ಕಾಗಲಿ ಅಥವಾ ಕೆಲಸ ಮಾಡತಕ್ಕ ಸ್ಥಳಕ್ಕಾಗಲಿ ಟಪಾಲು ಮೂಲಕವಾಗಿ ಆ ನೋಟೀಸನ್ನು ಆತನಿಗೆ ಜಾರಿ ಮಾಡಬೇಕು.

ಬಳಿಕ ಗವರ್ನಮೆಂಟನವರು ಒಪ್ಪತಕ್ಕಬಗ್ಗೆ ಆ ಉಪಾಯವನ್ನು ಕಳುಹಿಸತಕ್ಕದ್ದು.

17. (1) ನೋಟೀಸುಗಳ ಪ್ರಕಟನ ಮತ್ತು ಜಾರಿ ವಿಷಯವಾಗಿರುವ ಮೇಲ್ಕಂಡ ನಿಯಮಗಳಂತೆ ನಡಿಸಿದ ತರುವಾಯ ಬೋರ್ಡು, 16ನೆ ಪ್ರಕರಣದಂತೆ ತಾವು ಹೊಂದಿರುವ ಯಾವ ಜವಾಬೋ ಅಥವಾ ಅರಿಕೆಯೋ ಅದನ್ನ ಆಲೋಚಿಸಿ, ಮತ್ತು ತಾವು ಯುಕ್ತವೆಂದು ಎಣಿಸಬಹುದಾದ ಯಾವ ಬದಲಾವಣೆಗಳನ್ನಾದರೂ ಆ ಉಪಾಯಕ್ಕೆ ಸೇರಿಸಿದ ನಂತರ, ಆ ಉಪಾಯ ಮಂಜೂರಾಗುವ ಬಗ್ಗೆ ಗವರ್ನಮೆಂಟನವರನ್ನು ಕೋರತಕ್ಕದ್ದು.

ಅಪ್ಲಿಕೇಷನ ಜೊತೆಯಲ್ಲಿ ಕಳುಹಿಸಬೇಕಾದ ಕಾಗದಗಳು.

(2) (3) ನೆ ಉಪಪ್ರಕರಣದಲ್ಲಿ ನೇಮಿಸಿರುವ ವಿಷಯದಲ್ಲಿ ಹೊರ್ತು, ಮಂಜೂರಾತಿಬಗ್ಗೆ ಮಾಡುವ ಕೋರಿಕೆಯೊಡನೆ—

(a) ಆ ಉಪಾಯದ ಎಲ್ಲಾ ತಪಶೀಲುಗಳ ವಿವರ ಮತ್ತು ಅದರಲ್ಲಿ ಮಾಡಿರುವ ಬದಲಾವಣೆಗಳ ಕಾರಣಗಳು ;

(b) ಆ ಉಪಾಯದ ನೆರವೇರಿಕೆಗೆ ಬೇಕಾದ ಖರ್ಚಿನ ಎಸ್ಟಿಮೇಟುಗಳು ಮತ್ತು ಸಂಪೂರ್ಣವಾದ ಪ್ಲಾನುಗಳು ;

(c) ಸಂಪಾದಿಸಬೇಕೆಂದು ಯೋಚಿಸಲ್ಪಟ್ಟ ಜಮೀನನ್ನು ವಿವರಿಸುವ ಒಂದು ಸ್ಟೇಟಮೆಂಟು ;

(d) 16ನೆ ಪ್ರಕರಣದ (1) ನೆ ಉಪ ಪ್ರಕರಣದಂತೆ ಹೊಂದಲ್ಪಟ್ಟ ಯಾವದಾದರು ಅರಿಕೆ ;

(e) (c) ಕಲಂನಲ್ಲಿ ಕಂಡ ಸ್ಟೇಟ್ಮೆಂಟಿನಲ್ಲಿ ವಿವರಿಸಲ್ಪಟ್ಟ ಎಲ್ಲಾ ಭೂಮಿಯ ನೆಲಕಂದಾಯವನ್ನು, ಅಥವಾ ಆ ಭೂಮಿಗೆ ಸಮ್ಮಂಧವಾದ ಇಸ್ತಿಹಾರು 16ನೆ ಪ್ರಕರಣದಂತೆ ಪ್ರಕಟಣೆಯಾದ ತಾರೀಕಿನಲ್ಲಿ ಮ್ಯುನಿಸಿಪಲ್ ತೆರಿಗೆ ಬುಕ್ಕಿನಲ್ಲಿ ನಮೂದಾಗಿರುವ ಅದರ ದಾಮಾಷೆಯನ್ನು ತೋರಿಸುವ ಒಂದು ಪಟ್ಟಿ ; ಮತ್ತು

(f) ಗವರ್ನಮೆಂಟನವರು ವಿಧಿಸಬಹುದಾದ ಇತರ ಅಧಿಕ ವಿವರಗಳು,

ಇವುಗಳನ್ನೆಲ್ಲ ಕಳುಹಿಸಬೇಕು.

ಅತಿ ಬಡವರಾದವರಿಗು ಮತ್ತು ಕೂಲಿ ಮಾಡುವವರಿಗು ಮನೆಗಳನ್ನು ಕಟ್ಟಿಸಲು ಅವಕಾಶ ಉಂಟುಮಾಡುವ ಉಪಾಯದ ಸಂದರ್ಭದಲ್ಲಿ ನಡಿಸುವ ರೀತಿ.

(3) ಯಾವ ಉತ್ತಮಪಡಿಸುವ ಉಪಾಯದಂತಾಗಲಿ ಅತಿ ಬಡವರಿಗು ಮತ್ತು ಕೂಲಿ ಮಾಡುವರಿಗು ಮನೆಗಳನ್ನು ಕಟ್ಟಿಸೋಣ ನಿಶ್ಚಯಿಸಲ್ಪಟ್ಟಿರುವದಾದರೆ, ಬೋರ್ಡು, 16ನೆ ಪ್ರಕರಣದ ನಿಯಮಗಳನ್ನಾಚರಿಸಿದ ತರುವಾಯ, ಅಂಥ ಮನೆಗಳನ್ನು ಕಟ್ಟುವದಕ್ಕೋಸ್ಕರವಾದ ಪ್ಲಾನುಗಳನ್ನು ಎಸ್ಟಿಮೇಟುಗಳನ್ನು ಸಹ ಗವರ್ನಮೆಂಟನವರಿಗೆ ಮಂಜೂರಾತಿ ಬಗ್ಗೆ ಕೂಡ್ಲೆ ಒಪ್ಪಿಸತಕ್ಕದ್ದು ; ಮತ್ತು, ಅಂಥ ಮಂಜೂರಾತಿಯು ಮುಟ್ಟಿದ ನಂತರ, 18ನೆ ಪ್ರಕರಣದ ನಿಯಮಗಳು, ಅವಶ್ಯವಿರುವ ಎಲ್ಲಾ ಬದಲಾವಣೆಗಳೊಡನೆ, ಸದರಿ ಮನೆಗಳನ್ನು ಕಟ್ಟಿಸಲು ಆ ಉಪಾಯದ ಯಾವ ಅಂಶದಲ್ಲಿ ನಿಶ್ಚಯಿಸಿರುತ್ತೋ ಆ ಅಂಶಕ್ಕೆ, ಆ ಅಂಶವೆ ಆ ಉಪಾಯವೆಂದು ಭಾವಿಸಲ್ಪಟ್ಟಂತೆ, ಪ್ರಯೋಗವಾಗತಕ್ಕದ್ದು.

ಮಂಜೂರಾತಿಯು ಮುಟ್ಟಿದನಂತರ ಸಂಪಾದಿಸಬೇಕಾದ ಭೂಮಿಯ ವಿವರಗಳನ್ನು ತೋರಿಸುವ ಪ್ರಸಿದ್ಧಿ ಪತ್ರವನ್ನು ಪ್ರಕಟಿಸಬೇಕು.

18. (1) (a) ಗವರ್ನಮೆಂಟನವರ ಮಂಜೂರಾತಿಯು ಮುಟ್ಟಿದನಂತರ, ಛೇರ್ಮನ್ನು, ಸದರಿ ಮಂಜೂರಾತಿಯು ಆಗಿರುತ್ತೆಂಬುವದನ್ನು ಮತ್ತು ಆ ಉಪಾಯದ ಉದ್ದೇಶಗಳಿಗೋಸ್ಕರ ಬೋರ್ಡಿನಿಂದ ನಿಶ್ಚಯಿಸಲ್ಪಟ್ಟ ಆ ಜಮೀನ ಸಂಪಾಧನೆಯು ಒಂದು ಸರಕಾರಿ ಕೆಲಸಕ್ಕೋಸ್ಕರ ಬೇಕಾಗಿರುತ್ತೆಂಬುವದನ್ನು ಕುರಿತು ಒಂದು ಪ್ರಸಿದ್ಧಿ ಪತ್ರವನ್ನು ಗವರ್ನಮೆಂಟನ ಒಬ್ಬ ಸೆಕ್ರೆಟೆರಿಯು ದಸ್ತಕತುನಿಶಿಯಾಗಿ ಪ್ರಕಟಿಸಲ್ಪಡುವದಕ್ಕೋಸ್ಕರ ಕಳುಹಿಸತಕ್ಕದ್ದು.

(b) ಆ ಪ್ರಸಿದ್ಧಿಪತ್ರವು ಸರಕಾರ ಗೆಜೆಟ್ಟಿನಲ್ಲಿ ಛಾಪಿಸಲ್ಪಡಬೇಕಲ್ಲದೆ, ಅದರಲ್ಲಿ, ಸಂಪಾದಿಸಲು ನಿಶ್ಚಯಿಸಲ್ಪಟ್ಟ ಜಮೀನು ಇರುವ ಸರಹದ್ದುಗಳನ್ನು, ಅದು ಬೇಕಾಗಿರುವ ಉದ್ದೇಶವನ್ನು, ಅದರ ಸುಮಾರಾದ ವಿಸ್ತೀರಣವನ್ನು, ಮತ್ತು ಆ ಜಮೀನಿನ ಪ್ಲಾನನ್ನು ನೋಡಬಹುದಾದ ಸ್ಥಳವನ್ನು ತಿಳಿಸಬೇಕು

ಅಂಥ ಪ್ರಕಟನೆಯ ನಂತರ ಬೋರ್ಡು ಆ ಉಪಾಯನ್ನು ನೆರವೇರಿಸತಕ್ಕದ್ದು.

(c) ಆ ಜಮೀನು ಒಂದು ಸರಕಾರ ಉದ್ದೇಶಕ್ಕೋಸ್ಕರ ಬೇಕಾಗಿರುತ್ತೆಂಬುವದಕ್ಕೆ ಸದರಿ ಪ್ರಸಿದ್ಧಿ ಪತ್ರವೇ ನಿರುತ್ತರವಾದ ನಿದರ್ಶನವಾಗಿರತಕ್ಕದ್ದು, ಮತ್ತು ಬೋರ್ಡು, ಸದರಿ ಪ್ರಸಿದ್ಧಿಪತ್ರವು ಪ್ರಕಟನೆ ಮಾಡಲ್ಪಟ್ಟ ತರುವಾಯ, ಆ ಉಪಾಯವನ್ನು ಜಾರಿ ಮಾಡಲು ಉದ್ಯುಕ್ತರಾಗತಕ್ಕದ್ದು.

ಆ ಉಪಾಯದ ಯಾವ ಅಂಶವನ್ನಾಗಲಿ ಬದಲಾಯಿಸುವ ಅಧಿಕಾರವು ಬೋರ್ಡಿಗೆ ಇರತಕ್ಕದ್ದು.

(2) (a) ಆ ಉಪಾಯದ ಯಾವ ಅಂಶದಲ್ಲಾಗಲಿ ಗುಣವೃದ್ಧಿ ಮಾಡಲಿಕ್ಕಾಗುತ್ತೆಂಬುವದು ಯಾವ ಕಾಲದಲ್ಲಾಗಲಿ ಬೋರ್ಡಿಗೆ ತೋರಿಬಂದಲ್ಲಿ ಅಂಥ ಗುಣವೃದ್ಧಿ ಮಾಡುವ ಉದ್ದೇಶಕ್ಕೋಸ್ಕರ ಬೋರ್ಡು ಆ ಉಪಾಯವನ್ನು ಬದಲಾಯಿಸಬಹುದು, ಮತ್ತು ಹಾಗೆ ಬದಲಾಯಿಸಲ್ಪಟ್ಟಂತೆ ಆ ಉಪಾಯವನ್ನು ಕೂಡಲೆ ಜಾರಿ ಮಾಡಲು ಬೋರ್ಡು, ಈ ಉಪಪ್ರಕರಣದ ಮೂರನೆಯ ಎರಡು ಕಲಂಗಳಿನ ನಿಯಮಗಳಿಗೊಳಪಟ್ಟು, ಉದ್ಯುಕ್ತರಾಗತಕ್ಕದ್ದು.

 631

(b) ಮಂಜೂರಾದ ಉಪಾಯವನ್ನು ಜಾರಿಗೆ ತರಲು ಅಂದಾಜು ಮಾಡಿದ ಐನು ಕರ್ಚಿಗೆ, ಬದಲಾಯಿಸಲ್ಪಟ್ಟ ಉಪಾಯವನ್ನು ಜಾರಿಗೆ ತರಲು ಅಂದಾಜು ಮಾಡಿದ ಐನು ಕರ್ಚು ರೂ. 2,500 ಗಳಿಗೆ ಮೇಲ್ಪಟ್ಟು ಅಧಿಕವಾಗುವದಾದರೆ, ಗವರ್ನಮೆಂಟಿನವರ ಪೂರ್ವಭಾವಿಯಾದ ಮಂಜೂರಾತಿಯನ್ನು ಪಡೆದಹೊರ್ತು, ಬೋರ್ಡು ಬದಲಾಯಿಸಲ್ಪಟ್ಟ ಉಪಾಯವನ್ನು ಜಾರಿಗೆ ತರಲು ಉದ್ಯುಕ್ತರಾಗಕೂಡದು.

(c) 17ನೆ ಪ್ರಕರಣದ (2) (e) ಕಲಮಿನಂತಿರುವ ಉಪಾಯವನ್ನೊಡಗೂಡಿದ ಪಟ್ಟಿಯಲ್ಲಿ ವಿವರಿಸಲ್ಪಟ್ಟ ಜಮೀನಲ್ಲದ ಇತರ ಯಾವ ಜಮೀನನ್ನಾಗಲಿ, ಕರಾರುದೆಶೆಯಿಂದಲ್ಲದ ಇತರ ವಿಧಾನದಲ್ಲಿ ಸಂಪಾದಿಸಬೇಕಾದ್ದು, ಬದಲಾಯಿಸಲ್ಪಟ್ಟ ಉಪಾಯದಲ್ಲಿ ಆಗರ್ಭವಾಗಿರುವ ಪಕ್ಷಕ್ಕೆ. 16, 17ನೆ ಪ್ರಕರಣಗಳ ಮತ್ತು (1)ನೆ ಉಪ ಪ್ರಕರಣವಾದ ನಿಯಮಗಳು ಆ ಉಪಾಯದ ಬದಲಾಯಿಸಲ್ಪಟ್ಟ ಭಾಗಕ್ಕೆ, ಆ ಭಾಗವೆ ಆ ಉಪಾಯವೆಂದು ಭಾವಿಸಲ್ಪಟ್ಟಂತೆ, ಪ್ರಯೋಗವಾಗತಕ್ಕದ್ದು.

ಸಾಧಾರಣ ವಿಷಯಗಳು.

ಮ್ಯುನಿಸಿಪಲ್ ಕಮ್ಮಿಷನರುಗಳಿಗೆ ಕೊಡಲ್ಪಟ್ಟ ಭೂಮಿಯು ಬೀದಿಯನ್ನು ಮಾಡುವದಕ್ಕಾಗಲಿ ಅಥವಾ ಬದಲಾಯಿಸುವದಕ್ಕಾಗಲಿ ಬೋರ್ಡಿಗೆ ಬೇಕಾಗಿದ್ದರೆ ಬೋರ್ಡಿಗೆ ಹಂಗಾಮಿಯಾಗಿ ಕೊಡತಕ್ಕದ್ದು.

19. ಯಾವದಾದರೊಂದು ಉತ್ತಮಪಡಿಸುವ ಉಪಾಯದಂತೆ, ಯಾವ ಬೀದಿಯನ್ನು ರೂಪಿಸಲು, ಬದಲಾಯಿಸಲು, ಅಗಲ ಮಾಡಲು, ತಿರುಗಿಸಲು, ಎತ್ತರಿಸಲು, ಪುನಹ ಕ್ರಮಪಡಿಸಲು, ಅಥವಾ ಪುನಹ ಕಟ್ಟಿಸಲು, ಬೋರ್ಡಿಗೆ ಕರ್ತವ್ಯವಾಗಿರುತ್ತದೆಯೊ ಆ ಬೀದಿಯ ಯಾವದೊಂದಾದರು ಭಾಗದ ಸ್ಥಳದಲ್ಲಿ, ಮ್ಯೂನಿಸಿಪಲ್ ಕಮ್ಮಿಷನರುಗಳಿಗೆ ಕೊಡಲ್ಪಟ್ಟಿರುವ ಸದ್ಯದಲ್ಲಿರತಕ್ಕ ಸಾರ್ವಜನಿಕ ಬೀದಿಯ ಅಥವಾ ಇತರ ಜಮೀನಿನ ಎಲ್ಲವಾಗಲಿ ಅಥವಾ ಯಾವ ಭಾಗವಾಗಲಿ, ಯಾವಾಗಲಾದರು ಅಡಗಿಕೊಂಡಿರುವ ಸಂದರ್ಭದಲ್ಲಿ ; ಸದ್ಯದಲ್ಲಿರುವ ಅಂಥ ಬೀದಿಯ ಅಥವಾ ಇತರ ಜಮೀನಿನ (ಇಲ್ಲಿ ಮುಂದೆ "ಬೇಕಾದ ಭಾಗ" ವೆಂದು ಕರಿಯಲ್ಪಟ್ಟ) ಎಲ್ಲವಾಗಲಿ ಅಥವಾ ಒಂದು ಭಾಗವಾಗಲಿ, ಹ್ಯಾಗೆ ವಿದ್ಯಮಾನವಿರುತ್ತೆಯೊ ಹಾಗೆ, ಮೇಲ್ಕಂಡಂತೆ ತಾವು ನಡಿಸತಕ್ಕದ್ದಾದ ಬೀದಿಯ ಭಾಗವಾಗಿರೋಣದರಿಂದ ತಮಗೆ ಬೇಕಾಗಿರುತ್ತೆಂದು ಬೋರ್ಡು, ಮ್ಯೂನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟ್ರಿಗೆ ನೋಟಿಸನ್ನು ಜಾರಿ ಮಾಡಬೇಕು ; ಅದರ ಮೇಲೆ 21ನೆ ಪ್ರಕರಣದ (1)ನೆ ಉಪ ಪ್ರಕರಣದ ನಿಯಮಗಳಿಗೊಳಪಟ್ಟು ಆ ಬೇಕಾದ ಭಾಗವು ಬೋರ್ಡಿಗೆ ಕೊಡಲ್ಪಡತಕ್ಕದ್ದು: ಆದರೆ ಯಾವ ಮ್ಯೂನಿಸಿಪಲ್ ಬಚ್ಚಲು ಅಥವಾ "ವಾಟರ್ ವರ್ಕ್" ನ ಮೇಲೆಯಾಗಲಿ ಮ್ಯುನಿಸಿಪಲ್ ರೆಗ್ಯುಲೇಷನುಗಳನುಸರಿಸಿ ಮ್ಯೂನಿಸಿಪಲ್ ಕಮ್ಮಿಷನರುಗಳಿಗೆ ಇರುವ ಹಕ್ಕುಗಳಿಗಾಗಲಿ ಅಥವಾ ಅಧಿಕಾರಗಳಿಗಾಗಲಿ ಈ ಪ್ರಕರಣದಲ್ಲಿರುವ ನಿಯಮದಿಂದ ಕುಂದಕವಾಗುತ್ತೆಂದು ಎಣಿಸಕೂಡದು.

ಬೀದಿಗಳ ಸಮ್ಮಂಧದಲ್ಲಿ ಮ್ಯೂನಿಸಿಪಲ್ ಕಮ್ಮಿಷನರುಗಳಿಗೆ ಇರುವ ಕೆಲವು ಅಧಿಕಾರಗಳನ್ನು ಬೋರ್ಡು, ತಮಗೆ ಕೊಡಲ್ಪ[illegible] ಜಮೀನನ್ನು ಕುರಿತು ಜಾರಿಯ[illegible]ಬಹುದು.

20. ಬೀದಿಗಳನ್ನು ಕುರಿತು ಇರುವ ಮ್ಯೂನಿಸಿಪಲ್ ರೆಗ್ಯುಲೇಷನುಗಳ ಪ್ರಕರಣಗಳು 94ಇಂದ 101ವರೆಗೆ, 113ಇಂದ 115ವರೆಗೆ, 118ಇಂದ 124ವರೆಗೆ, 126ಇಂದ 128ವರೆಗೆ, 130, 131, 136, 171, 172 ಮತ್ತು 175ಇಂದ 178ವರೆಗೆ, ಇವುಗಳ ನಿಯಮಗಳು ಈ ರೆಗ್ಯುಲೇಷನಿನ ಅಭಿಪ್ರಾಯಕ್ಕೆ ಅನುಗುಣವಾಗಿರುವಷ್ಟಿಗು, ಈ ರೆಗ್ಯುಲೇಷನಿನ ಪ್ರಕಾರ ಬೋರ್ಡಿಗೆ ಕೊಡಲ್ಪಟ್ಟಿರುವ ಬೀದಿಗಳಿಗಾಗಲಿ ಅಥವಾ ಅವುಗಳ ಭಾಗಗಳಿಗಾಗಲಿ ಪ್ರಯೋಗವಾಗತಕ್ಕದ್ದು ; ಮತ್ತು ಮ್ಯೂನಿಸಿಪಲ್ ಕಮ್ಮಿಷನರುಗಳಿಗಾಗಲಿ ಅಥವಾ ಇತರ ಮ್ಯೂನಿಸಿಪಲ್ ಅಧಿಕಾರಿಗಾಗಲಿ ಸದರಿ ನಿಯಮಗಳಲ್ಲಿರುವ ದಾಖಲೆಗಳೆಲ್ಲ ಬೋರ್ಡಿಗೆ ಸಮ್ಮಂಧಪಟ್ಟ ದಾಖಲೆಗಳೆಂದು ಅನ್ವಯಿಸತಕ್ಕದ್ದು.

ಬೀದಿಗಳು ತಯಾರಾದ ಬಳಿಕ ಮ್ಯುನಿಸಿಪಲ್ ಕಮ್ಮಿಷನರುಗಳಿಗೆ ಕೊಡಲ್ಪಡುವದಲ್ಲದೆ ಅವರುಗಳ ನಿಗಾವಣೆಯಲ್ಲಿರಬೇಕು.

21. (1) ಗವರ್ನಮೆಂಟಿನವರಿಂದ ಮಂಜೂರಾದಂಥ ಯಾವದೊಂದಾದರು ಉಪಾಯದ ಪ್ಲಾನುಗಳಲ್ಲಿ ಕಂಡ ರೀತಿಯಂತೆ ಬೋರ್ಡಿನಿಂದ ರೂಪಿಸಲ್ಪಟ್ಟ ಯಾವದೊಂದು ಬೀದಿಯಾದರೂ ತಕ್ಕಹಾಗೆ ಸಮಪಡಿಸಲ್ಪಟ್ಟು, ಪರಸ್ಥಂದಿ ಮಾಡಲ್ಪಟ್ಟು, (metalled) ಕಲ್ಲು ಚೂರುಗಳು ಹಾಕಲ್ಪಟ್ಟು, (flagged) ಹಾಸಿಗೆ ಕಲ್ಲುಗಳು ಹಾಸಲ್ಪಟ್ಟು, ಕಾಲಿವೆಗಳು ಕಟ್ಟಲ್ಪಟ್ಟು, ಬಚ್ಚಲುಗಳು ಇಡಲ್ಪಟ್ಟು, ಗ್ರಾಮಸಾರದ ಮೊಹರಿಗಳು ಹೊಂದಿಸಲ್ಪಟ್ಟು ಇರುತ್ತೆಂಬುವದರಲ್ಲಿಯು, ಮತ್ತು ಆ ಬೀದಿಯಲ್ಲಿ ದೀಪ ಮುಟ್ಟಿಸಲು ತಮ್ಮ (ಪ್ರೆಸಿಡೆಂಟರ) ಅಭಿಪ್ರಾಯದಲ್ಲಿ ಅಗತ್ಯವಾದ್ದೆಂದಿರುವದಲ್ಲದೆ ಬೋರ್ಡಿನಿಂದ ಒದಗಿಸಲ್ಪಡಬೇಕಾದ್ದಾಗಿರುವ ದೀಪಗಳನ್ನು, ದೀಪದ ಕಂಬಗಳನ್ನು ಮತ್ತು ಇತರ ಉಪಕರಣಗಳನ್ನು ಬೋರ್ಡು ಸಿದ್ಧಪಡಿಸಿರುತ್ತಾರೆಂಬುವದರಲ್ಲಿಯು ಮನವರಿಕೆಯಾದ ತರುವಾಯ, ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರು ಅಂಥ ಬೀದಿಯು ಒಂದು ಸಾರ್ವಜನಿಕವಾದ ಬೀದಿಯೆಂದು ಪ್ರಕಟಿಸತಕ್ಕದ್ದು ; ಮತ್ತು ಅದರ ಮೇಲೆ ಅಂಥ ಬೀದಿಯನ್ನು ಮ್ಯುನಿಸಿಪಲ್ ಕಮ್ಮಿಷನರುಗಳ ಸ್ವಾಧೀನಕ್ಕೆ ಒಪ್ಪಿಸಬೇಕು ಅಥವಾ ಪುನಹ ಒಪ್ಪಿಸಬೇಕು, ಹ್ಯಾಗೆ ವಿದ್ಯಮಾನ ವಿರುತ್ತದೊ ಹಾಗೆ ; ಮತ್ತು ಮ್ಯುನಿಸಿಪಲ್ ಕಮ್ಮಿಷನರುಗಳು ಅದು ಮೊದಲ್ಗೊಂಡು ಆ ಬೀದಿಯನ್ನು ಜೀರ್ಣೋದ್ಧಾರ ಮಾಡಬೇಕಾದ್ದಲ್ಲದೆ ಮರಾಮತ್ತು ಮಾಡುತ್ತಾ ಬೆಳಕು ಮಾಡುತ್ತಾ ಚೊಕ್ಕಟಪಡಿಸುತ್ತಾ ಇರಬೇಕು.

ಗಾಳಿ ಬೀಸುವದಕ್ಕೋಸ್ಕರ ಉಳಿಸಿಕೊಂಡ ಬೈಲು ಭೂಮಿಗಳು ಮ್ಯುನಿಸಿಪಲ್ ಕಮ್ಮಿಷನರುಗಳ ಸ್ವಾಧೀನ ಮತ್ತು ಸಂರಕ್ಷಣೆಯಲ್ಲಿರಬೇಕು.

(2) ಪಟ್ಟಣದ ಯಾವ ಭಾಗದಲ್ಲಿಯಾಗಲಿ ಗಾಳಿ ಬೀಸುವದಕ್ಕೋಸ್ಕರ ಉಳಿಸಿಕೊಂಡಿರಲ್ಪಟ್ಟ ಮತ್ತು ಗವರ್ನಮೆಂಟಿನವರಿಂದ ಮಂಜೂರಾಗಿರುವ ಯಾವದಾದರೂ ಒಂದು ಉತ್ತಮ ಪಡಿಸುವ ಉಪಾಯಕ್ಕೆ ಸೇರಿದ ಭಾಗವೆಂದು ಬೋರ್ಡಿನಿಂದ ನಿಶ್ಚಯಿಸಲ್ಪಟ್ಟ ಇರುವ ಯಾವ ಬೈಲುಭೂಮಿಯನ್ನಾಗಲಿ ಪೂರಯಿಸಿದ ತರುವಾಯ ಮ್ಯುನಿಸಿಪಲ್ ಕಮ್ಮಿಷನರುಗಳ ಕರ್ಚಿನಲ್ಲಿ ಸಂರಕ್ಷಿಸಲ್ಪಡುವದಕ್ಕೋಸ್ಕರ ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರ ವಶಕ್ಕೆ ಒಪ್ಪಿಸಬೇಕು, ಮತ್ತು ಅದು ಮೊದಲ್ಗೊಂಡು ಮ್ಯುನಿಸಿಪಲ್ ಕಮ್ಮಿಷನರುಗಳ ಸ್ವಾಧೀನದಲ್ಲಿರಬೇಕು.

(3) ಈ ಪ್ರಕರಣದ ಯಾವ ನಿಯಮಗಳನ್ನು ಕುರಿತಾಗಲಿ ಬೋರ್ಡಿಗೂ, ಮತ್ತು ಮ್ಯುನಿಸಿಪಲ್ ಕಮ್ಮಿಷನಿನ ಪ್ರಸಿಡೆಂಟರಿಗೂ ಬೀಳುವ ಯಾವ ವ್ಯಾಜ್ಯವನ್ನಾದರೂ ಗವರ್ನಮೆಂಟಿನವರು ಫೈಸಲು ಮಾಡಬೇಕು. ಅಂಥ ಫೈಸಲೆ ಕಡೇ ಫೈಸಲಾಗಿರತಕ್ಕದ್ದು.

ಈ ಪ್ರಕರಣದಲ್ಲಿ ಉಂಟಾಗುವ ವ್ಯಾಜ್ಯಗಳನ್ನು ಗವರ್ನಮೆಂಟಿನವರು ಫೈಸಲು ಮಾಡಬೇಕು.

ಜಮೀನಾ ಸಂಪಾದನೆ.

22. ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರ ಬೋರ್ಡಿಗೆ ಬೇಕಾಗಿದ್ದು, ಪಟ್ಟಣದ ಒಳಗಾಗಲಿ ಹೊರಗಾಗಲಿ ಇರುವ ಯಾವ ಭೂಮಿಯನ್ನಾದರೂ ಅಥವಾ ಅದರಲ್ಲಿನ ಬಾಧ್ಯತೆಯನ್ನಾದರೂ ಪೂರ್ಣವಾಗಲಿ, ವಳ್ಳೆವರೊಂದಿಗೆ ಸದರಿ ಭೂಮಿಯನ್ನಾಗಲಿ ಅದರಲ್ಲಿನ ಬಾಧ್ಯತೆಯನ್ನಾಗಲಿ ಕ್ರಯಕ್ಕೆ ತೆಗದುಕೊಳ್ಳುವದಕ್ಕೋಸ್ಕರ ಕರಾರು ಮಾಡಲು, ಈ ರೆಗ್ಯುಲೇಷನಿನ ನಿಯಮಗಳಿಗೆ ಒಳಪಟ್ಟು, ಬೋರ್ಡಿಗೆ ನ್ಯಾಯವಾಗಿರತಕ್ಕದ್ದು.

ಕರಾರು ಮೂಲಕ ಜಮೀನು ಸಂಪಾದಿಸಲು ಬೋರ್ಡಿಗೆ ಅಧಿಕಾರವಿರತಕ್ಕದ್ದು.

23. ಪಟ್ಟಣದ ಒಳಗಾಗಲಿ ಹೊರಗಾಗಲಿ ಭೂಮಿಯನ್ನು ಕರಾರು ಮೂಲಕವಲ್ಲದೆ ಇತರ ವಿಧಾನದಲ್ಲಿ ಈ ರೆಗ್ಯುಲೇಷನಿನಂತೆ ಸಂಪಾದಿಸೋಣವು, 189 ನೆ ವರುಷದ ಭೂಸಂಪಾದನೆ ವಿಷಯದ ರೆಗ್ಯುಲೇಷನಿನ ನಿಯಮಗಳು ಎಷ್ಟುಮಟ್ಟಿಗೆ ಪ್ರಯೋಗವಾಗಬಹುದೊ ಅಷ್ಟುಮಟ್ಟಿಗೆ ಆ ನಿಯಮಗಳಿಂದಲೂ, ಮತ್ತು ಈ ಕೆಳಗೆ ಬರುವ ಅಧಿಕ ನಿಯಮಗಳಿಂದಲೂ ಕ್ರಮಪಡಿಸಲ್ಪಡತಕ್ಕದ್ದು. ಆ ಅಧಿಕ ನಿಯಮಗಳು ಯಾವವೆಂದರೆ :—

ಕರಾರು ಮೂಲಕವಲ್ಲದ ಇತರ ವಿಧಾನದಲ್ಲಿ ಭೂ ಸಂಪಾದನೆಯನ್ನು ಮಾಡುವದಕ್ಕೆ ಪ್ರಯೋಗವಾಗತಕ್ಕ ನಿಯಮಗಳು.

(1) ಯಾವ ಪ್ರದೇಶವನ್ನು ಕುರಿತಾಗಲಿ ಒಂದು ಉತ್ತಮಪಡಿಸುವ ಉಪಾಯವು 14ನೆ ಪ್ರಕರಣದಂತೆ ಅವಶ್ಯವಿರುತ್ತೆಂದು ಬೋರ್ಡು ನಿರ್ಣಯಿಸಿದ ತರುವಾಯ, ಭೂ ಸಂಪಾದನೆ ವಿಷಯದ ರೆಗ್ಯುಲೇಷನಿನ 4 (2) ಉಪಪ್ರಕರಣದಂತೆ ನಡಿಯುವ ಬಗ್ಗೆ ಗವರ್ನಮೆಂಟಿನವರಿಂದ ತಕ್ಕಹಾಗೆ ಅಧಿಕಾರ ಕೊಡಲ್ಪಟ್ಟ ಒಬ್ಬ ಉದ್ಯೋಗಸ್ಥನಿಗಾದರೂ ಅವನ ಸೇವಕರಿಗಾದರೂ ಕೂಲಿಯವರಿಗಾದರೂ ಅಪ್ಪಣೆನುಸಾರವಾಗಿ ಯಾವ ಕಾರ್ಯಗಳನ್ನು ಮಾಡುವದು ನ್ಯಾಯವಾಗಿರುತ್ತೆಯೊ ಅಂಥಾ ಎಲ್ಲಾ ಕಾರ್ಯಗಳನ್ನು, ಬೋರ್ಡಿನಿಂದ ಇದರ ಪರದಲ್ಲಿ ಸಾಧಾರಣವಾಗಿಯಾಗಲಿ ವಿಶೇಷವಾಗಿಯಾಗಲಿ ಅಧಿಕಾರ ಕೊಡಲ್ಪಟ್ಟ ಯಾವ ಮನುಷ್ಯನಿಗಾದರೂ ಅವನ ಸೇವಕರಿಗಾದರೂ ಕೂಲಿಯವರಿಗಾದರೂ ಆ ಪ್ರದೇಶದಲ್ಲಿರುವ ಭೂಮಿಯ ಸಮ್ಮಂಧವಾಗಿ ಮಾಡುವದು ನ್ಯಾಯವಾಗಿರತಕ್ಕದ್ದು ; ಮತ್ತು ಸದರಿ ರೆಗ್ಯುಲೇಷನಿನ 5ನೆ ಪ್ರಕರಣದಲ್ಲಿರುವ ನಿಯಮವು, ಮೇಲೆ ನಮೂದಾಗಿರುವ ಯಾವ ಕಾರ್ಯಗಳ ದೆಶೆಯಿಂದಾಗಲಿ ಉಂಟಾದ ನಷ್ಟದ ವಿಷಯಕ್ಕೆ ಅದೇ ರೀತಿಯಲ್ಲಿ ಪ್ರಯೋಗವಾಗತಕ್ಕದ್ದು.

(2) 13ನೆ ಪ್ರಕರಣದಂತೆ ಮಾಡಲ್ಪಟ್ಟ ಪ್ರಕಟಣೆಯು, ಭೂ ಸಂಪಾದನೆಯ ವಿಷಯದ ರೆಗ್ಯುಲೇಷನಿನ 6ನೆ ಪ್ರಕರಣದಂತೆ ಮಾಡಲ್ಪಟ್ಟ ಪ್ರಕಟಣೆಯಾಗಿ ಎಣಿಸಲ್ಪಡತಕ್ಕದ್ದು.

(3) ಭೂ ಸಂಪಾದನೆಯ ವಿಷಯದ ರೆಗ್ಯುಲೇಷನಿನ 50 (2)ನೆ ಪ್ರಕರಣದ ಉದ್ದೇಶಗಳಿಗೋಸ್ಕರ ಬೋರ್ಡು, ಸಂಮಂಧಪಟ್ಟ ಸ್ಥಳಿಕ ಅಧಿಕಾರಸ್ಥರಾಗಿ ಎಣಿಸಲ್ಪಡತಕ್ಕದ್ದು.

(4) ಭೂ ಸಂಪಾದನೆಯ ವಿಷಯದ ರೆಗ್ಯುಲೇಷನಿನ 16ನೆ ಪ್ರಕರಣದಂತೆ ಭೂಮಿಯು ಗವರನ್ಮೆಂಟಿನವರ ವಶವಾದ ತರುವಾಯ, ಡೆಪ್ಯುಟಿ ಕಮಿಷನರವರು, ಆ ಸಂಪಾದನೆಯ ಖರ್ಚು ಪಾವತಿಯಾದಬಳಿಕ ಮತ್ತು ಆ ಸಂಪಾದನೆಗಾಗಿ ಮಾಡಲ್ಪಡಬಹುದಾದ ಯಾವ ಅಧಿಕ ಖರ್ಚನ್ನಾಗಲಿ ಪಾವತಿ ಮಾಡಲು ಬೋರ್ಡು ಒಪ್ಪಿಕೊಂಡ ಬಳಿಕ, ಬೋರ್ಡಿನ ವಶಕ್ಕೆ ಆ ಭೂಮಿಯನ್ನು ಕೊಡತಕ್ಕದ್ದು, ಮತ್ತು ಅದರಮೇಲೆ ಆ ಭೂಮಿಯು ಬೋರ್ಡಿಗೆ ಸೇರಿರತಕ್ಕದ್ದು.

IV ನೆ ಅಧ್ಯಾಯ ಸ್ವತ್ತು ಮತ್ತು ನಗದಿ.

24. ಗವರ್ನಮೆಂಟಿನವರು ವಿಧಿಸಬಹುದಾದ ವಿನಹಾಯಿತಿಗಳಿಗೂ ಷರತ್ತುಗಳಿಗೂ ಮತ್ತು ಇದರಲ್ಲಿ ಮುಂದೆ ಬರುವ ನಿಯಮಗಳಿಗೂ ಒಳಪಟ್ಟು ಗವರ್ನಮೆಂಟಿನವರು ತಮಗಾಗಲಿ ಅಥವಾ ಮ್ಯುನಿಸಿಪಲ್ ಕಮಿಷನರುಗಳಿಗಾಗಲಿ ಸೇರಿರುವ ಯಾವ ಭೂಮಿಯನ್ನಾದರೂ ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರವಾಗಿ ಆಗಿಂದಾಗ್ಗೆ ಬೋರ್ಡಿಗೆ ಒಪ್ಪಿಸಿಕೊಡಬಹುದು.

ತಮಗಾಗಲಿ ಮ್ಯುನಿಸಿಪಲ್ ಕಮಿಷನರುಗಳಿಗಾಗಲಿ ಸೇರಿದ ಭೂಮಿಗಳನ್ನು ಬೋರ್ಡಿಗೆ ಕೊಡಲು ಗವರ್ನಮೆಂಟಿನವರಿಗಿರುವ ಅಧಿಕಾರ.

ಆದರೆ ಯಾವ ಭೂಮಿಯು ಬೋರ್ಡಿನಿಂದ ಆಗಲೆ ವಶಕ್ಕೆ ಕೊಡಲ್ಪಡದೆ ಇದ್ದು, ಅಥವಾ ವಶಕ್ಕೆ ಕೊಡಲು ಕರಾರು ಮಾಡಲ್ಪಡದೆ ಇದ್ದು, ಗವರ್ನಮೆಂಟಿನವರಿಗಾಗಲಿ ಅಥವಾ ಮ್ಯುನಿಸಿಪಲ್ ಕಮ್ಮಿಷನರುಗಳಿಗಾಗಲಿ ಒಂದು ಸಾರ್ವಜನಿಕ ಉದ್ದೇಶಕ್ಕೋಸ್ಕರ ಅಗತ್ಯವಿರುತ್ತೆಯೊ ಆ ಭೂಮಿಯು, ಗವರ್ನಮೆಂಟಿನವರಿಂದಲೊ ಅಥವಾ ಗವರ್ನಮೆಂಟಿನವರ ಮಂಜೂರಾತಿಯನ್ನು ಪೂರ್ವಭಾವಿಯಾಗಿ ಪಡೆದು ಮ್ಯುನಿಸಿಪಲ್ ಕಮ್ಮಿಷನರುಗಳಿಂದಲೊ, ಹ್ಯಾಗೆ ಸಂದರ್ಭವೊ ಹಾಗೆ, ಗವರ್ನಮೆಂಟಿನವರು ಅಪ್ಪಣೆ ಕೊಡಿಸಬಹುದಾದ ಶರ್ತುಗಳಂತೆ, ಯಾವ ಕಾಲದಲ್ಲಾಗಲಿ, ಪುನಹಾ ಸ್ವಾಧೀನಕ್ಕೆ ತೆಗದುಕೊಳ್ಳಬಹುದು.

ಸಾರ್ವಜನಿಕ ಉದ್ದೇಶಕ್ಕೋಸ್ಕರ ಬೇಕಾದ ಭೂಮಿಗಳನ್ನು ತಿರಿಗಿ ತೆಕ್ಕೊಳ್ಳುವ ವಿಷಯದ ನಿಯಮ.

ಸ್ವತ್ತನ್ನು ಸಂಪಾದಿಸಲು ಮತ್ತು ಇಟ್ಟುಕೊಳ್ಳಲು ಬೋರ್ಡಿಗೆ ಇರುವ ಅಧಿಕಾರ.

25. ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರ, ಪಟ್ಟಣದ ಒಳಗಾಗಲಿ ಅಥವಾ ಹೊರಗಾಗಲಿ ಚರ ಮತ್ತು ಸ್ಥಿರ ಸ್ವತ್ತನ್ನು ಸಂಪಾದಿಸಲು ಮತ್ತು ಇಟ್ಟುಕೊಳ್ಳಲು ಬೋರ್ಡಿಗೆ ಅಧಿಕಾರವಿರತಕ್ಕದ್ದು; ಮತ್ತು ಈ ರೆಗ್ಯುಲೇಷನಿನ ನಿಯಮಗಳಿಗೆ ಒಳಪಟ್ಟು, ಈ ಕೆಳಗೆ ಬರುವ ಕಾರ್ಯಗಳಿಗಾಗಿಯೂ ಕೂಡ ಅಧಿಕಾರವಿರತಕ್ಕದ್ದು: ಏನಂದರೆ—

ಗುತ್ತಿಗೆ ಕೊಡೋಣ.

(1) ತಮ್ಮಿಂದ ಸಂಪಾದಿಸಲ್ಪಟ್ಟ ಅಥವಾ ತಮಗೆ ಕೊಡಲ್ಪಟ್ಟ ಯಾವ ಚರ ಅಥವಾ ಸ್ಥಿರ ಸೊತ್ತನ್ನಾಗಲಿ ಬಾಡಿಗೆಗೆ ಅಥವಾ ಗುತ್ತಿಗೆಗೆ ಕೊಡೋಣ;

ಕ್ರಯಕ್ಕೆ ಮತ್ತು ಇತರ ವಿಧದಲ್ಲಿ ಕೊಡುವದು.

(2) ತಮಗೆ ಕೊಡಲ್ಪಟ್ಟ ಅಥವಾ ತಮ್ಮಿಂದ ಸಂಪಾದಿಸಲ್ಪಟ್ಟ ಯಾವ ಚರ ಅಥವಾ ಸ್ಥಿರ ಸ್ವತ್ತನ್ನಾಗಲಿ ಯಾವ ಶರ್ತುಗಳೊಂದಿಗಾದರು ಅಥವಾ ಯಾವ ಶರ್ತುಗಳಿಲ್ಲದೇಯೂ ಕ್ರಯಕ್ಕ ಮತ್ತು ಇತರ ವಿಧದಲ್ಲಿಯು ಕೊಡೋಣ;

ತಮಗೆ ಕೊಡಲ್ಪಟ್ಟಿರುವ ಭೂಮಿಗಳನ್ನು ಉತ್ತಮಪಡಿಸುವ ಉಪಾಯಗಳ ಉದ್ದೇಶಗಳಿಗೋಸ್ಕರ ಪ್ರಯೋಗಿಸುವದು.

(3) ತಮಗೆ ಕೊಡಲ್ಪಟ್ಟ ಅಥವಾ ತಮ್ಮಿಂದ ಸಂಪಾದಿಸಲ್ಪಟ್ಟ ಎಲ್ಲಾ ಭೂಮಿಗಳನ್ನಾಗಲಿ ಅಥವಾ ಅವುಗಳ ಯಾವ ಅಂಶವನ್ನಾಗಲಿ, ಬೈಲು ಪ್ರದೇಶಗಳನ್ನು ಮಾಡುವದಕ್ಕಾದರೂ, ಕಟ್ಟುವ ಉದ್ದೇಶಗಳಿಗೋಸ್ಕರವಾದರು, ಅಥವಾ ಯಾವ ಉತ್ತಮಪಡಿಸುವ ಉಪಾಯದ ಉದ್ದೇಶಗಳಿಗೋಸ್ಕರ ಯಾವ ವಿಧಾನದಲ್ಲಿಯಾದರು, ಉಪಯೋಗಿಸೋಣ ಅಥವಾ ಪ್ರಯೋಗಿಸೋಣ.

ಉತ್ತಮಪಡಿಸುವ ವಿಷಯದ ಫಂಡು ಮತ್ತು ಅದರ ಜಮೆಗೆ ಬರತಕ್ಕ ಬಾಬುಗಳು.

26. (1) ಈ ರೆಗ್ಯುಲೇಷನಿನ ಪ್ರಕಾರ ಬೋರ್ಡಿಗೆ ಕೊಡಲ್ಪಟ್ಟ, ಕೊಡಬೇಕಾಗಿರುವ, ಅಥವಾ ಬೋರ್ಡಿನಿಂದ ಸಂಪಾದಿಸಲ್ಪಟ್ಟ ಸಮಸ್ತ ಭೂಮಿಗಳ, ಕಟ್ಟಡಗಳ ಮತ್ತು ಇತರ ಸ್ವತ್ತುಗಳ, ಬಾಡಿಗೆಗಳು, ಆದಾಯಗಳು ಮತ್ತು ಕ್ರಯದ ಹುಟ್ಟುವಳಿಗಳು "ಮೈಸೂರು ಪಟ್ಟಣದ ಇಂಪ್ರೂವ್‌ಮೆಂಟ್ ಫಂಡ" ಎಂದು ಕರೆಯಲ್ಪಡಬೇಕಾದ ಒಂದು ಫಂಡಿನ ಜಮೆಗೆ ಬರತಕ್ಕದ್ದು.

(2) ಸದರಿ ಫಂಡಿನ ಜಮೆಗೇನೆ ಬರತಕ್ಕ ಇತರ ಬಾಬುಗಳ್ಯಾವವೆಂದರೆ—

(a) ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರವಾಗಿ ಬೋರ್ಡಿನ ವಶಕ್ಕೆ ಗವರ್ನಮೆಂಟಿನವರಿಂದ ಆಗಿಂದಾಗ್ಗ ಕೊಡಲ್ಪಡಬಹುದಾದ ಮೊಬಲಗುಗಳು; ಮತ್ತು

(b) ಬೋರ್ಡಿನವರಿಂದ ಹಿಡಿಯಲ್ಪಟ್ಟ ಉತ್ತಮ ಪಡಿಸುವ ಉಪಾಯಗಳಿಂದ ಮ್ಯುನಿಸಿಪಲ್ ದ್ರವ್ಯಕ್ಕೆ ಪರಿಣಮಿಸಿದ ಅಥವಾ ಪರಿಣಮಿಸುವಂತೆ ಕಾಣುವ ವೃದ್ಧಿಯನ್ನಾಗಲಿ ಅಥವಾ ಸಹಾಯವನ್ನಾಗಲಿ ಗವರ್ನಮೆಂಟಿನವರು ಆಲೋಚಿಸಿ, ಮ್ಯೂನಿಸಿಪಲ್ ಫಂಡಿನಿಂದ ಯಾವ ಮೊಬಲಗುಗಳನ್ನು ಕೊಡಬೇಕೆಂಗು ಮ್ಯೂನಿಸಿಪಲ್ ಕಮ್ಮಿಷನರುಗಳನ್ನು ಆಗಿಂದಾಗ್ಗ ಆಜ್ಞಾಪಿಸುತ್ತಾರೊ ಆ ಮೊಬಲಗುಗಳು.

ಇಂಪ್ರೂವ್‌ಮೆಂಟ್ ಫಂಡಿನ ಪ್ರಯೋಗ.

27. (1) ಸದರಿ ಫಂಡು ಬೋರ್ಡಿನ ವಶದಲ್ಲಿರತಕ್ಕದ್ದು; ಮತ್ತು, ಸಾಮಾನ್ಯವಾಗಿಯಾದರು ಅಥವಾ ಪ್ರತ್ಯೇಕವಾಗಿಯಾದರು ಗವರ್ನಮೆಂಟಿನವರಿಂದ ವಿಧಿಸಲ್ಪಟ್ಟ ಆಜ್ಞೆಗಳಿಗೆ ಒಳಪಟ್ಟು, ಈ ರೆಗ್ಯುಲೇಷನಿನ ಉದ್ದೇಶಗಳನ್ನು ಜಾರಿಗೆ ತರೋಣದರಲ್ಲಿ ಸಂಭವಿಸುವ ಖರ್ಚುಗಳಿಗೆ ಬೋರ್ಡಿನಿಂದ ಉಪಯೋಗಿಸಲ್ಪಡತಕ್ಕದ್ದು.

(2) ಅಂಥಾ ಖರ್ಚುಗಳಲ್ಲಿ, ಇತರ ಬಾಬುಗಳ ಪೈಕಿ, ಅಡಗಿರುವವುಗಳು, ಏನಂದರೆ:—

(a) ಈ ರೆಗ್ಯುಲೇಷನಿನ ಪ್ರಕಾರ ಬೋರ್ಡಿನ ವಶಕ್ಕೆ ಬಂದಿರುವ ಅಥವಾ ಬರುವ ಅಥವಾ ಬೋರ್ಡಿನಿಂದ ಸಂಪಾದಿಸಲ್ಪಟ್ಟ ಸ್ವತ್ತಿನ ಬಾಡಿಗೆಗಳು ಆದಾಯಗಳು ಮತ್ತು ಇತರ ಹುಟ್ಟುವಳಿಗಳು ಇವುಗಳನ್ನು ವಸೂಲ್ಮಾಡುವದಕ್ಕೋಸ್ಕರ ಉದ್ಯೋಗಸ್ಥರು ಮತ್ತು ಸೇವಕರನ್ನು ಇಟ್ಟುಕೊಳ್ಳುವ ಖರ್ಚು;

(b) ಫೇರಿಸ್ತು ಆದ ಸಿಬ್ಬಂದಿಯ ಭಾಗವಲ್ಲದೆ ಇದ್ದು, ಸ್ವತ್ತುಗಳ ನಿಗಾವಣೆಗಾಗಲಿ ಅಥವಾ ಇತರ ಹುಟ್ಟುವಳಿ ಉದ್ದೇಶಗಳಿಗಾಗಲಿ ಅವಶ್ಯಕವಾಗಿರುವ ಚಿಕ್ಕ ಮತ್ತು ಇತರ ಸಿಬ್ಬಂದಿಯ ಖರ್ಚು;

(c) ಫೇರಿಸ್ತು ಆದ ಸಿಬ್ಬಂದಿಯ ಸಂಬಳ ಮತ್ತು ಅಲವನ್ಸುಗಳು ಮತ್ತು ಆಕಸ್ಮಿಕವಾದ ಖರ್ಚುಗಳು ಸೇರಿ ಕೆಲಸದ ಚಲಾವಣೆಗಾಗಿ ಆಗುವ ಖರ್ಚು;

(d) ಬೋರ್ಡಿಗೆ ಕೊಡಲ್ಪಟ್ಟು ಮತ್ತು ವಿನಾಯಿತಿಗೆ ಒಳಪಡದೆ ಇರುವ ಭೂಮಿಗಳ ಮೇಲೂ, ಕಟ್ಟಡಗಳ ಮೇಲೂ, ಮ್ಯೂನಿಸಿಪಲ್ ರೆಗ್ಯುಲೇಷನ್ನುಗಳಂತೆ ವಸೂಲ್ಮಾಡಲ್ಪಡುವ ತೆರಿಗೆಗಳ ಮತ್ತು ಕಂದಾಯಗಳ ವಿಷಯದಲ್ಲಿ ಬೋರ್ಡಿನಿಂದ ಕೊಡಲ್ಪಡುವ ಎಲ್ಲಾ ಹಣಗಳು.

(3) ಮನೆಗಳನ್ನಾಗಲಿ ಅಥವಾ ಇತರ ವಸತಿಗಳನ್ನಾಗಲಿ ಹೊಂದಿಸಿಕೊಳ್ಳಲು, ಸರಕಾರದ ನವಕರುಗಳಲ್ಲದ ಜನಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶಕ್ಕೋಸ್ಕರ, 38ನೆ ಪ್ರಕರಣದಂತೆ ಗವರ್ನಮೆಂಟಿನವರಿಂದ ಮಾಡಲ್ಪಟ್ಟ ನೇಮಗಳಿಗೆ ಅನುಸಾರವಾಗಿ, ಬೋರ್ಡು ಆಗಿಂದಾಗ್ಗೆ ಸದರಿ ಫಂಡಿನಿಂದ ಮುಂಗಡಗಳನ್ನು ಕೊಡಬಹುದು.

ಜಮಾ ಖರ್ಚಿನ ಸಾಲಿಯಾನಾ ಅಂದಾಜು ಚೇರಮನ ಮಾಡತಕ್ಕದ್ದು.

28. (1) ಪ್ರತಿ ವರುಷದ ಮೇ (May) ಗುರ್ರ್ರ ತಾರೀಖಿಗೆ ಮೀರದೆ ಇರುವ ದಿನದಲ್ಲಿ ಮಾಡಲ್ಪಡಬೇಕಾಗಿರುವ ಒಂದು ವಿಶೇಷವಾದ ಮೀಟಿಂಗಿನಲ್ಲಿ ಚೇರಮೆನ್ನು, ಬೋರ್ಡು ಆಗಿಂದಾಗ್ಗೆ ವಿಧಿಸುವ ತಪಶೀಲುನಲ್ಲಿಯೂ ಮತ್ತು ನಮೂನೆಯುಂತೆಯೂ, ಮಾರಣೆ ಜುಲೈ (July) ಗುರ್ರ್ರ ತಾರೀಖಿನಿಂದ ಆರಂಭಿಸುವ ವರುಷಕ್ಕೆ ಬೋರ್ಡಿನ ಜಮಾ ಖರ್ಚಿನ ಅಂದಾಜನ್ನು ಬೋರ್ಡಿಗೆ ಒಪ್ಪಿಸತಕ್ಕದ್ದು.

(2) ಅಂಥಾ ಅಂದಾಜು, ಈ ರೆಗ್ಯುಲೇಷನಿನ ಚಲಾವಣೆಯು ಕಾರ್ಯ ಸಾಧಕವಾಗಿರುವದಕ್ಕೆ ಬೇಕಾದ ಅನುಕೂಲವನ್ನುಂಟಾಗಿರತಕ್ಕದ್ದು ಮತ್ತು ಸಂಪೂರ್ಣವಾಗಿರತಕ್ಕದ್ದು. ಆ ಅಂದಾಜಿನ ಒಂದು ನಕಲನ್ನು, ಪ್ರತಿ ಒಬ್ಬ ಟ್ರಸ್ಟಿಗೂ, ಯಾವ ಮೀಟಿಂಗಿನಲ್ಲಿ ಆ ಅಂದಾಜನ್ನು ಒಪ್ಪಿಸಬೇಕೋ ಅದಕ್ಕೆ ಕನಿಷ್ಟಪಕ್ಷದಲ್ಲಿ ಹತ್ತು ದಿನಗಳ ಮುಂಚೆ, ಟಪಾಲುಮೂಲಕವಾಗಲಿ, ಇತರ ವಿಧದಲ್ಲಿ ಆಗಲಿ, ಕಳುಹಿಸತಕ್ಕದ್ದು.

ಬೋರ್ಡು ಆ ಅಂದಾಜನ್ನು ಮಂಜೂರ್ಮಾಡತಕ್ಕದ್ದು ಅಥವಾ ತಿದ್ದುಪಡಿ ಮಾಡತಕ್ಕದ್ದು.

29. ಬೋರ್ಡು ಹಾಗೆ ತಮಗೆ ಒಪ್ಪಿಸಲ್ಪಟ್ಟ ಅಂದಾಜನ್ನು ಆಲೋಚನೆಗೆ ತೆಗದುಕೊಳ್ಳತಕ್ಕದ್ದಲ್ಲದೆ, ತಿದ್ದುಪಾಟು ಇಲ್ಲದೆಯಾಗಲಿ, ತಮಗೆ ಉಚಿತವಾಗಿ ತೋರಿಬಂದ ತಿದ್ದುಪಾಟಿನಿಂದಾಗಲಿ ಅದನ್ನು ಮಂಜೂರ್ಮಾಡತಕ್ಕದ್ದು.

ಮಂಜೂರಾತಿ ಬಗ್ಗೆ ಗವರ್ನಮೆಂಟಿನವರಿಗೆ ಅಂದಾಜುಗಳು ಒಪ್ಪಿಸಲ್ಪಡತಕ್ಕದ್ದು.

30. ಆ ಅಂದಾಜನ್ನು ಬೋರ್ಡು ಮಂಜೂರುಮಾಡಿರುವಂತೆ ಗವರ್ನಮೆಂಟಿನವರಿಗೆ ಒಪ್ಪಿಸತಕ್ಕದ್ದು. ಗವರ್ನಮೆಂಟಿನವರು, ತಾವು ಯುಕ್ತವೆಂದೆಣಿಸುವ ಪಕ್ಷದಲ್ಲಿ, ಆ ಅಂದಾಜನ್ನಾಗಲಿ ಅದರ ಯಾವ ಭಾಗವನ್ನಾಗಲಿ, ಅಂಗೀಕರಿಸದೆ, ತಿದ್ದುಪಾಟಿಗಾಗಿ, ವಾಪಸು ಕಳುಹಿಸಬಹುದು. ಹಾಗೆ ಗವರ್ನಮೆಂಟಿನವರಿಂದ ಆ ಅಂದಾಜು ತಿರಿಗಿ ಕಳುಹಿಸಲ್ಪಡುವ ಸಂದರ್ಭದಲ್ಲಿ, ಬೋರ್ಡು, ಆ ಅಂದಾಜನ್ನು ತಿದ್ದುಪಡಿ ಮಾಡಲು ಕೂಡ್ಲೆ ಉದ್ಯುಕ್ತರಾಗತಕ್ಕದ್ದು ; ಮತ್ತು ಹಾಗೆ ತಿದ್ದುಪಡಿಯಾದ ಆ ಅಂದಾಜನ್ನು ಗವರ್ನಮೆಂಟಿನವರಿಗೆ ಪುನಹ ಒಪ್ಪಿಸತಕ್ಕದ್ದು. ಆ ಅಂದಾಜಿನ ಒಂದು ನಕಲನ್ನು ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟ್ರಿಗೆ ಕಳುಹಿಸಿಕೊಡತಕ್ಕದ್ದು.

ಅಗತ್ಯವಿದ್ದಾಗ್ಗೆ ಉಪಭಾಗವಾಗಿರುವ ಅಂದಾಜುಗಳನ್ನು ತಯಾರ್ಮಾಡಿ ಒಪ್ಪಿಸಬಹುದು.

31. ಬೋರ್ಡು, ಯಾವ ವರುಷಕ್ಕೆ ಅಂಥಾ ಯಾವ ಅಂದಾಜು ಮಂಜೂರ್ಮಾಡಲ್ಪಟ್ಟು ಇದೆಯೊ ಆ ವರು[illegible]ಯಾವ ಕಾಲದಲ್ಲಿಯಾದರೂ, ಒಂದು ಉಪಭಾಗವಾಗಿರುವ ಅಂದಾಜನ್ನು ತಯಾರ್ಮಾಡಿಸಿ ತಮಗೆ ಒಪ್ಪಿಸಲ್ಪಡಿಸಬಹುದು. ಪ್ರತಿ ಒಂದಂಥಾ ಉಪಭಾಗವಾಗಿರುವ ಅಂದಾಜನ್ನು ಬೋರ್ಡು ಆಲೋಚನೆಗೆ ತೆಗದುಕೊಳ್ಳತಕ್ಕದ್ದಲ್ಲದೆ, ಮಂಜೂರ್ಮಾಡಿ ಗವರ್ನಮೆಂಟಿನವರಿಗೆ ಒಪ್ಪಿಸತಕ್ಕದ್ದು ; ಮತ್ತು, ಒಂದು ನಕಲನ್ನು, ಅದು ಮೂಲ ಸಾಲಿಯಾನಾ ಅಂದಾಜಾಗಿದ್ದರೆ ಯಾವರೀತಿಯಲ್ಲಿ ಕಳುಹಿಸಲ್ಪಡುತ್ತಿತ್ತೊ ಅದೇರೀತಿಯಲ್ಲಿ, ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟ್ರಿಗೆ ಕಳುಹಿಸತಕ್ಕದ್ದು.

ಕರ್ಚಿನ ವಿಷಯುವಾದ ನಿಯಮಗಳು.

32. ಗವರ್ನಮೆಂಟಿನವರಿಂದ ಕಡೆಗೆ ಮಂಜೂರ್ಮಾಡಲ್ಪಟ್ಟು ತತ್ಕಾಲದೊಳಗೆ ಜಾರಿಯಲ್ಲಿರುವ ಯಾವದೊಂದು ಅಂದಾಜಿನಲ್ಲಾಗಲಿ, ಅಥವಾ ಕೋರ್ಟಿನ ಡಿಕ್ರಿ ಯಾ ಫೈಸಲಂತೆ ಬೋರ್ಡಿನಿಂದ ಕೊಡಲ್ಪಡಬೇಕಾಗಿರುವ ಮೊಬಲಗಿನಲ್ಲಾಗಲಿ, ಅಡಗಿದ್ದರೇನೆ ಶಿವಾಯಿ, ಯಾವ ಹಣವು ಕೂಡಾ ಬೋರ್ಡಿನಿಂದ ಅಥವಾ ಬೋರ್ಡಿನಪರವಾಗಿ ಕರ್ಚು ಮಾಡಲ್ಪಡಕೂಡದು. ಆದರೆ ಕೇವಲ ಅವಸರವಾದ ಅನುಪತ್ಯದಲ್ಲಿ ಎರಡುಸಾವಿರದ ಐನೂರು ರೂಪಾಯಿಗಳಿಗೆ ಮೀರದಂತೆ, ಹಣವನ್ನು ಹಾಗೆ ಅದು ಅಡಗನೆ ಇದ್ದಾಗ್ಯೂ, ಕರ್ಚು ಮಾಡಬಹುದಲ್ಲದೆ, ಚೇರಮೆನ್ನು, ಆ ವಿದ್ಯಮಾನಗಳನ್ನು ಮತ್ತು ಯಾವ ವಿಧದಲ್ಲಿ ಈ ವಿಶೇಷವಾದ ಕರ್ಚನ್ನು ತೀಲಿಸಲು ಬೋರ್ಡು ಯೋಚಿಸಿರುತ್ತಾರೊ ಅದರ ವಿವರವನ್ನು, ಕೂಡ್ಲೆ ಗವರ್ನಮೆಂಟಿನವರಿಗೆ ತಿಳಿಸತಕ್ಕದ್ದು.

ಕಂಟ್ರೋಲರು ಲೆಕ್ಕಗಳನ್ನು ಸರಿನೋಡಿ ತನಿಖೆ ಮಾಡಿ ಗವರ್ನಮೆಂಟಿನವರಿಗೆ ಒಪ್ಪಿಸತಕ್ಕದ್ದು.

33. ಸರ್ಕಾರಿ ಡಿಪಾರ್ಟಮೆಂಟುಗಳ ಲೆಕ್ಕಗಳನ್ನು ಸರಿನೋಡಿ ತನಿಖೆ ಮಾಡುವ ವಿಧಾನದಲ್ಲಿ, ಕಂಟ್ರೋಲರು ಬೋರ್ಡಿನ ಜಮಾಕರ್ಚಿನ ಲೆಕ್ಕಗಳನ್ನು ಸರಿನೋಡಿ ತನಿಖೆ ಮಾಡತಕ್ಕದ್ದು. ಸದರಿ ಲೆಕ್ಕಗಳು ಪ್ರತಿ ವರುಷದಲ್ಲಿ ಎರಡಾವರ್ತಿ ಗವರ್ನಮೆಂಟಿನವರಿಗೆ ಒಪ್ಪಿಸಲ್ಪಡಬೇಕು. ತನಿಖೆ ಮಾಡಲ್ಪಟ್ಟ ಪ್ರತಿ ವರುಷದ ಲೆಕ್ಕಗಳ ಗೋಷ್ವಾರೆಯು ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟ್ರಿಗೆ ಕಳುಹಿಸಲ್ಪಡಬೇಕು.

V ನೆ ಅಧ್ಯಾಯ.—ಬೋರ್ಡಿನ ಉದ್ಯೋಗಸ್ಥರು ಮತ್ತು ಸೇವಕರು.

ಗವರ್ನಮೆಂಟಿನವರ ಮಂಜೂರಾತಿ ಬಗ್ಗೆ ಉದ್ಯೋಗಸ್ಥರ ಮತ್ತು ಸೇವಕರ ಪಟ್ಟಿಯನ್ನು ಒಪ್ಪಿಸಬೇಕು.

34. ಬೋರ್ಡು, ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರ ಯಾವ ಉದ್ಯೋಗಸ್ಥರನ್ನು ಮತ್ತು ಸೇವಕರನ್ನು ಇಟ್ಟುಕೊಳ್ಳೋಣವು ಅಗತ್ಯವಾಗಿಯು ಯುಕ್ತವಾಗಿಯು ಇದೆಯೆಂದು ಎಣಿಸುತ್ತಾರೊ ಅವರುಗಳ ಒಂದು ಪಟ್ಟಿಯನ್ನು ಆಗಿಂದಾಗ್ಗೆ ತಯಾರ್ಮಾಡುವದಲ್ಲದೆ ಗವರ್ನಮೆಂಟಿನವರ ಮಂಜೂರಾತಿ ಬಗ್ಗೆ ಒಪ್ಪಿಸತಕ್ಕದ್ದು. ಪ್ರತಿ ಒಂದಂಥಾ ಉದ್ಯೋಗಸ್ಥನಿಗು ಸೇವಕನಿಗು ಯಾವ ಸಂಬಳಗಳು, ಫೀಜುಗಳು ಮತ್ತು ಅಲವನ್ಸುಗಳು ಕೊಡಲು ಬೋರ್ಡು ಅಭಿಪ್ರಾಯ ಪಡುತ್ತಾರೊ, ಅವುಗಳ ಮೊಬಲಗು ಮತ್ತು ಸ್ವಭಾವವನ್ನು ಸದರಿ ಪಟ್ಟಿಯಲ್ಲಿ ಸೂದು ಮಾಡಿರಬೇಕು. ಗವರ್ನಮೆಂಟಿನವರ ಮಂಜೂರಾತಿಯನ್ನು ಪೂರ್ವಭಾವಿಯಾಗಿ ಪಡದ ಹೊರ್ತು, ಮಂಜೂರ್ಮಾಡಲ್ಪಟ್ಟ ಆ ಪಟ್ಟಿಯಲ್ಲಿ ಯಾವ ಬದಲಾವಣೆಯನ್ನು ಮಾಡಕೂಡದು.

ನೇಮಕಗಳು ಮುಂತಾದವುಗಳು ಯಾರಿಂದ ಮಾಡಲ್ಪಡಬೇಕಾದ್ದು.

35. (1) ಸರ್ಕಾರದ ನವಕರರಾಗಿ ಬೋರ್ಡಿನ ತಾಬೆಯಲ್ಲಿರುವವರು ಶಿವಾಯಿ, ನೂರು ರೂಪಾಯಿಗಳಿಗೆ ಹೆಚ್ಚದೆ ಇರುವ ತಿಂಗಳುಗಟ್ಲೆಯ ಸಂಬಳವುಳ್ಳ ಬೋರ್ಡಿನ ಉದ್ಯೋಗಸ್ಥರನ್ನು ಮತ್ತು ಸೇವಕರನ್ನು ನೇಮಕ, ಬಡ್ತಿ, ಸಸ್ಪೆಂಡು, ಬರತರಫ್ಪು, ಜುಲ್ಮಾನೆ, ಕಂಪ್ಷರಾ ಮಾಡುವ ಅಥವಾ ಅವರುಗಳಿಗೆ ರಜಾ ಕೊಡುವ ಅಧಿಕಾರವು ಚೇರ್‌ಮೆನ್ನಿಂದಲು, ಮತ್ತು ಪ್ರತಿ ಒಂದಿತರ ಸಂದರ್ಭದಲ್ಲಿ ಅಂಥಾ ಅಧಿಕಾರವು ಬೋರ್ಡಿನಿಂದಲು, 39 (1) ನೆ ಪ್ರಕರಣದ (c) ಕಲಮಿನಂತೆ ಮಾಡಲ್ಪಟ್ಟ ಬಳ ನಿಬಂಧನೆಗಳ ನಿಯಮಗಳಿಗೂ ಮತ್ತು 34ನೆ ಪ್ರಕರಣದಂತೆ ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ತತ್ಕಾಲದಲ್ಲಿ ಜಾರಿಯಲ್ಲಿರುವ ಪಟ್ಟಿಯ ನಿಯಮಗಳಿಗೂ ಒಳಪಟ್ಟು, ನಡಿಸಲ್ಪಡತಕ್ಕದ್ದು.

(2) ಸರ್ಕಾರದ ನವಕರನಾಗಿ ಬೋರ್ಡಿನ ತಾಬೆಯಲ್ಲಿರುವವನು ಶಿವಾಯಿ, ಬೋರ್ಡಿನ ಯಾವ ಉದ್ಯೋಗಸ್ಥನನ್ನಾಗಲಿ ಸೇವಕನನ್ನಾಗಲಿ, ಅಂಥಾ ಉದ್ಯೋಗಸ್ಥನ ಅಥವಾ ಸೇವಕನ ಸ್ವಂತ ದುರ್ನಡತೆಯ ದೆಶೆಯಿಂದಲ್ಲದ ಇತರ ಕಾರಣಕ್ಕಾಗಿ, ಕೆಲಸದಿಂದ ತೆಗದುಹಾಕುವದಕ್ಕೂ, ಅಥವಾ ಅಂಥಾ ಯಾವ ಉದ್ಯೋಗಸ್ಥನನ್ನಾಗಲಿ ಸೇವಕನನ್ನಾಗಲಿ, ಪೆನ್ಷನ್, ಗ್ರಾಂಟು, ಅಥವಾ ಅಲವನ್ಸು ಕೊಟ್ಟು ಉದ್ಯೋಗದಿಂದ ನಿವೃತ್ತನಾಗಿಸುವದಕ್ಕೂ, ಅಧಿಕಾರವು, ಮೇಲ್ಕಂಡ ನಿಯಮಗಳಿಗೊಳಪಟ್ಟು, ಬೋರ್ಡಿಗೇನೆ ಇರತಕ್ಕದ್ದು.

ಬೋರ್ಡಿನ ತಾಬೆಯಲ್ಲಿರುವ ಸರ್ಕಾರದ ನವಕರ ವಿಷಯ.

36. ಗವರ್ನಮೆಂಟಿನವರಿಂದ ಆಗಿಂದಾಗ್ಗೆ ಮಾಡಲ್ಪಡಬಹುದಾದ ನೇಮಗಳ ಅಥವಾ ವಿಧಿಗಳಂತಿರುವ ಸಂದರ್ಭ ಹೊರ್ತು, ಬೋರ್ಡಿನ ತಾಬೆಯಲ್ಲಿರುವ ಸರ್ಕಾರದ ನವಕರುಗಳು, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳಲ್ಲಿ ಈ ಪರವಾಗಿ ಇರುವ ನಿಯಮಗಳಿಗೆ ಒಳಪಟ್ಟು ಇರತಕ್ಕದ್ದು.

VIನೆ ಅಧ್ಯಾಯ—ಬೋರ್ಡಿನ ಅಗಲಿಕೆ.

ಬೋರ್ಡಿನ ನೇಮಕದ ಉದ್ದೇಶ ಪೂರ್ತಿಯಾದಾಗ ಗವರ್ನಮೆಂಟಿನವರು ಅವರನ್ನ ಅಗಲಿಸಬಹುದು.

37. (1) ಗವರ್ನಮೆಂಟಿನವರ ಅಭಿಪ್ರಾಯದಲ್ಲಿ ಬೋರ್ಡಿನಿಂದ ನೆರವೇರಿಸಲ್ಪಡುವದಕ್ಕೋಸ್ಕರ ಗವರ್ನಮೆಂಟಿನವರು ಆಗಿಂದಾಗ್ಗೆ ಮಂಜೂರ್ಮಾಡಿದ ಉತ್ತಮಪಡಿಸುವ ಉಪಾಯಗಳೆಲ್ಲವು ವಾಸ್ತವಿಕವಾದ ಪೂರ್ಣತ್ವವನ್ನ ಹೊಂದಿರುತ್ತವೆಂದು, ಮತ್ತು ಪಟ್ಣವನ್ನು ಉತ್ತಮಪಡಿಸುವದಕ್ಕಾಗಿ ಇತಃಪರ ಸದ್ಯದಲ್ಲಿ ಅವಶ್ಯಕವಿರುವ ಇತರ ಕಾರ್ಯಭಾಗಗಳು, ಜಾರಿಯಲ್ಲಿರುವ ಮ್ಯುನಿಸಿಪಲ್ ಕಾನೂನಿನ ಸಾಮಾನ್ಯ ನಿಯಮಗಳ ಪ್ರಕಾರ ಸುಲಭವಾಗಿ ನಡಿಸಲ್ಪಡಬಹುದೆಂದು ಕಂಡುಬಂದರೆ, ಗವರ್ನಮೆಂಟಿನವರು, ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡಬೇಕಾದ ಒಂದು ನೇಮಕದ ದ್ವಾರಾ, ಆ ನೇಮಕದಲ್ಲಿ ಗೊತ್ತುಮಾಡಲ್ಪಡಬೇಕಾದ ಒಂದು ತಾರೀಕಿನಿಂದ ಬೋರ್ಡಿನ ಸಂಘವು ಅಗಲಿಸಲ್ಪಡತಕ್ಕದ್ದೆಂದು ಪ್ರಕಟನೆ ಮಾಡಬಹುದು.

ಅಗಲಿಸತಕ್ಕ ನೇಮಕದಲ್ಲಿ ವಿವರಿಸಲ್ಪಡಬೇಕಾದ ವಿಷಯಗಳು.

(2) ಆ ನೇಮಕದಲ್ಲಿ, ಬೋರ್ಡಿನ ಸ್ವತ್ತುಗಳು ಮತ್ತು ಸಾಲಗಳು ಯಾರಿಗೆ ಒಪ್ಪಿಸಲ್ಪಡಬೇಕೆಂಬುವದಕ್ಕೂ, ಬೋರ್ಡಿನ ವಶ ಮಾಡಲ್ಪಟ್ಟ ಸ್ವತನ್ನು ನಿರ್ವಹಿಸುವದಕ್ಕೂ ಅಥವಾ ಕೊಟ್ಟುಬಿಡುವದಕ್ಕೂ, ಅಪೂರ್ಣವಾದ ಕಾರ್ಯಗಳನ್ನು ಪೂರಯಿಸುವದಕ್ಕೂ, ಮತ್ತು ಬೋರ್ಡಿನ ಅಗಲುವಿಕೆಗೆ ಮತ್ತು ಅವರ ಸಂಗತಿಗಳು ಬಗೆಹರಿಸುವದಕ್ಕೆ ಸಮ್ಮಂಧಪಡುವ ಎಲ್ಲಾ ಇತರ ವಿಷಯಗಳಿಗೂ, ಅವಕಾಶಕೊಡುವ ತಕ್ಕ ಏರ್ಪಾಟನ್ನು ಮಾಡಿರಬೇಕು.

ಸ್ಥಿರಸ್ವತ್ತು ವಶಪಡಿಸುವದು.

ಆದರೆ ಬೋರ್ಡಿನ ಅಗಲುವಿಕೆಯ ತಾರೀಕಿನಲ್ಲಿ ಅವರ ವಶಕ್ಕೆ ಕೊಡಲ್ಪಟ್ಟು, ಮತ್ತು ಸದರಿ ನೇಮಕದಲ್ಲಿ ಗವರ್ನಮೆಂಟಿನವರಿಗೆ ಸ್ಪಷ್ಟವಾಗಿ ಇಡಲ್ಪಡದೆ ಇರುವ, ಎಲ್ಲಾ ಸ್ಥಿರ ಸ್ವತ್ತುಗಳು ಆ ಬಳಿಕ ಮ್ಯುನಿಸಿಪಲ್ ಕಮ್ಮಿಷನರುಗಳ ವಶಕ್ಕೆ ಕೊಡಲ್ಪಡತಕ್ಕದ್ದು.

VIIನೆ ಅಧ್ಯಾಯ.—ನೇಮಗಳು ಮತ್ತು ಒಳ ನಿಬಂಧನೆಗಳು.

ದಂಡನೆಗಳು ಮುಂತಾದವುಗಳು.

ನೇಮಗಳನ್ನು ಮಾಡಲು ಗವರ್ನಮೆಂಟನವರಿಗೆ ಅಧಿಕಾರ.

38. ಈ ರೆಗ್ಯುಲೇಷನಿಗೆ ವಿರೋಧವಿಲ್ಲದಂತೆ ಗವರ್ನಮೆಂಟಿನವರು ಈ ಕೆಳಗೆ ಬರುವ ವಿಷಯಗಳನ್ನು ಕುರಿತು ಆಗಿಂದಾಗ್ಗೆ ನೇಮಗಳನ್ನು ಮಾಡಬಹುದು :—

(a) ಈ ರೆಗ್ಯುಲೇಷನಿನ ಚಲಾವಣೆಯ ಸಮ್ಮಂಧವಾದ ವಿಷಯಗಳಲ್ಲಾಗಲಿ ಇದರಲ್ಲಿ ಕಂಠೋಕ್ತವಾಗಿ ಏರ್ಪಡಿಸದೆ ಇರುವ ಸಂದರ್ಭಗಳಲ್ಲಾಗಲಿ, ಬೋರ್ಡು, ಮ್ಯುನಿಸಿಪಲ್ ಕಮ್ಮಿಷನರುಗಳು, ಸರ್ಕಾರಿ ಉದ್ಯೋಗಸ್ಥರು ಮತ್ತು ಎಲ್ಲಾ ಇತರ ಜನಗಳು-ಇವರುಗಳ ಉಪದೇಶಕ್ಕೋಸ್ಕರ, ಮತ್ತು

(b) ಸಾಮಾನ್ಯವಾಗಿ ಈ ರೆಗ್ಯುಲೇಷನಿನ ಉದ್ದೇಶಗಳನ್ನು ನೆರವೇರಿಸುವದಕ್ಕೋಸ್ಕರ.

ಒಳ ನಿಬಂಧನೆಗಳನ್ನು ಮಾಡಲು ಬೋರ್ಡಿಗೆ ಅಧಿಕಾರ.

39. (1) ಈ ರೆಗ್ಯುಲೇಷನಿಗೆ ವಿರೋಧವಿಲ್ಲದಂತೆಯು ಅಥವಾ ಗವರ್ನಮೆಂಟಿನವರಿಂದ ಮಾಡಲ್ಪಟ್ಟ ನೇಮಗಳಿಗೆ ವಿರೋಧವಿಲ್ಲದಂತೆಯು, ಬೋರ್ಡು ಆಗಿಂದಾಗ್ಗೆ ಒಳ ನಿಬಂಧನೆಗಳನ್ನು ಈ ಕೆಳಗೆ ಬರುವ ಸಂಗತಿಗಳ ಪರವಾಗಿ ಮಾಡಬಹುದು :—

(a) ಬೋರ್ಡಿನ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಕಮ್ಮಿಟಿಗಳಿಗೆ ಒಪ್ಪಿಸಿಕೊಡೋಣವನ್ನು ಕ್ರಮಪಡಿಸುವದಕ್ಕೋಸ್ಕರ ;

(b) ಈ ರೆಗ್ಯುಲೇಷನಿನ ಪ್ರಕಾರ ಅವರಿಂದ ಕೆಲಸಕ್ಕೆ ಇಟ್ಟುಕೊಳ್ಳಲ್ಪಟ್ಟ ಜನಗಳ ಉಪದೇಶಕ್ಕೋಸ್ಕರ ;

(c) ಸರ್ಕಾರದ ನವಕರರಾಗಿ ಬೋರ್ಡಿನ ತಾಬೆಯಲ್ಲಿರುವವರು ಹೊರ್ತು ಬೋರ್ಡಿನ ಉದ್ಯೋಗಸ್ಥರ ಮತ್ತು ಸೇವಕರುಗಳ ವಿಷಯವಾಗಿ, ರಜಾ, ರಜಾ ಅಲವರ್ನುಗಳು, ಪೆನ್ಷನ್ಗಳು ಮತ್ತು ಗ್ರಾಂಟುಗಳು-ಇವುಗಳನ್ನ ಕೊಡೋಣವನ್ನು ಮತ್ತು ಇತರ ವಿಷಯಗಳನ್ನು ಕ್ರಮಪಡಿಸುವದಕ್ಕೋಸ್ಕರ ;

(d) ಯಾವ ಉಪಾಯದಂತಾಗಲಿ, ಕೇವಲ ಬಡವರಾಗಿರುವ ಅಥವಾ ಕೂಲಿ ಮಾಡುವ ಜನಗಳಿಗೋಸ್ಕರ ಕಟ್ಟಲ್ಪಟ್ಟ ಮನೆಗಳನ್ನು ನಿರ್ವಹಿಸುವದು, ಉಪಯೋಗಿಸುವದು ಮತ್ತು ಕ್ರಮಪಡಿಸುವದು ಇವುಗಳಿಗೋಸ್ಕರ ;

(e) ಈ ಕೆಳಗೆ ಬರುವ ವಿಷಯಗಳನ್ನು ಕುರಿತು, ಕಟ್ಟಡಗಳನ್ನು ಕಟ್ಟಿಸೋಣವನ್ನ ಮತ್ತು ಪುನಹ ಕಟ್ಟಿಸೋಣವನ್ನ ಕ್ರಮ ಪಡಿಸುವದಕ್ಕೋಸ್ಕರ : ಏನಂದರೆ, ಕಟ್ಟುವದಕ್ಕೆ ಮುಂಚೆ ಕೊಡಬೇಕಾದ ನೋಟೀಸು, ಒಪ್ಪಿಸಲ್ಪಡಬೇಕಾದ ಪ್ಲಾನುಗಳು, ಹತ್ತರದಲ್ಲಿರುವ ಕಟ್ಟಡಗಳ ಪಂಕ್ತಿಯಲ್ಲಿರಬೇಕಾದ ಮುಂಭಾಗ, ಕಟ್ಟಡದ ಸುತ್ತಲು ಬಿಡಬೇ[illegible]ಾಲಿ ಪ್ರದೇಶ, ಅಸ್ತಿವಾರದ ಅಗಲ ಮತ್ತು ಮಟ್ಟ, ಕಟ್ಟಡದ ಗಟ್ಟಿತನ, ಉಪಯೋಗಿಸಬೇಕಾದ ಪದಾರ್ಥಗಳು, ಮತ್ತು ಗಾಳಿ ಬೀಸುವದಕ್ಕೂ ಮತ್ತು ನೀರು ಹರಿಯುವದಕ್ಕೂ ಮಾಡಬೇಕಾದ ಅವಕಾಶ; ಮತ್ತು

(f) ಸಾಮಾನ್ಯವಾಗಿ ಈ ರೆಗ್ಯುಲೇಷನಿನ ಉದ್ದೇಶಗಳನ್ನು ನೆರವೇರಿಸುವದಕ್ಕೋಸ್ಕರ.

(2) ಗವರ್ನಮೆಂಟನವರಿಂದ ಒಪ್ಪಲ್ಪಡುವ ತನಕ ಯಾವ ಒಳ ನಿಬಂಧನೆಯು ಜಾರಿಗೆ ಬರಕೂಡದು, ಮತ್ತು ಅವಿಚ್ಛಿನ್ನವಾಗಿ ಮೂರು ವಾರಗಳ ಪರ್ಯಂತರ ಸರ್ಕಾರಿ ಗೆಜೆಟ್ಟಿನಲ್ಲಿ ಆ ಒಳ ನಿಬಂಧನೆಯು ಪ್ರಕಟಿಸಲ್ಪಟ್ಟಿರೇನೆ ಹೊರ್ತು ಅದು ಗವರ್ನಮೆಂಟನವರಿಂದ ಮಂಜೂರ್ಮಾಡಲ್ಪಡಕೂಡದು.

(3) ಈ ಪ್ರಕರಣದಂತೆ ಮಾಡಿ ಪ್ರಕಟಿಸಲ್ಪಟ್ಟ ಯಾವ ಒಳ ನಿಬಂಧನೆಯನ್ನಾಗಲಿ ಯಾವ ಕಾಲದಲ್ಲಿಯಾದರೂ ರದ್ದು ಮಾಡಲು ಗವರ್ನಮೆಂಟನವರಿಗೆ ನ್ಯಾಯವಾಗಿರತಕ್ಕದ್ದು.

ನೇಮಗಳ ಮತ್ತು ಒಳ ನಿಬಂಧನೆಗಳ ಲೋಪಕ್ಕೆ ದಂಡನೆಗಳು.

40. 38 ಮತ್ತು 39ನೆ ಪ್ರಕರಣಗಳಂತೆ ಬೇರೆ ಬೇರೆಯಾಗಿ ಮಾಡಲ್ಪಟ್ಟ ನೇಮಗಳಲ್ಲಿಯೂ ಮತ್ತು ಒಳ ನಿಬಂಧನೆಗಳಲ್ಲಿಯೂ, ಅವುಗಳ ಲೋಪಕ್ಕಾಗಿ ತಮಗೆ ಯುಕ್ತವೆಂದು ತೋರಿಬರುವ ದಂಡನೆಗಳನ್ನು, ಗವರ್ನಮೆಂಟಿನವರು, ಮತ್ತು ಗವರ್ನಮೆಂಟಿನವರ ಅನುಮತಿಯಿಂದ ಬೋರ್ಡು, ವಿಧಿಸಬಹುದು ; ಆದರೆ ಒಂದು ನೇಮ ಅಥವಾ ಒಳ ನಿಬಂಧನೆಯ ಯಾವದೊಂದು ಲೋಪಕ್ಕಾದರು ನೂರು ರೂಪಾಯಿಗಳಿಗೆ ಮೇಲ್ಪಟ್ಟ ದಂಡನೆಯಾಗಕೂಡದು, ಮತ್ತು ನಿಲ್ಲದೆ ನಡಿಯುವ ಲೋಪದ ವಿಷಯದಲ್ಲಿ, ಬೋರ್ಡಿನಿಂದ ತಪ್ಪಿತಸ್ಥನಿಗೆ ಆ ಲೋಪವನ್ನು ಕುರಿತು ನೋಟೀಸು ಕೊಡಲ್ಪಟ್ಟ ತರುವಾಯ, ಪ್ರತಿ ಒಂದು ದಿವಸಕ್ಕೋಸ್ಕರ ಕೊಡುವ ದಂಡನೆಯು ಐವತ್ತು ರೂಪಾಯಿಗಳಿಗೆ ಹೆಚ್ಚದಂತೆ ಇರತಕ್ಕದ್ದು.

ನೇಮಗಳು ಮತ್ತು ಒಳ ನಿಬಂಧನೆಗಳು ತೋರಿಸಲ್ಪಡಬೇಕು.

41. ಸದರಿ ನೇಮಗಳು ಮತ್ತು ಒಳ ನಿಬಂಧನೆಗಳು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಮುದ್ರಿಸಲ್ಪಟ್ಟು ಅನುಕೂಲವಾದ ಸ್ಥಳಗಳಲ್ಲಿ ತಗಲಹಾಕಲ್ಪಟ್ಟಿರಬೇಕು.

ಬೋರ್ಡಿನೊಂದಿಗೆ ಇರುವ ಗುತ್ತಿಗೆಗಳಲ್ಲಿ ಬಾಧ್ಯತೆಯನ್ನುಂಟಾಗಿರುವದಕ್ಕೆ ದಂಡನೆ.

42. ಬೋರ್ಡಿನೊಂದಿಗಾಗಲಿ, ಬೋರ್ಡಿನಿಂದಾಗಲಿ, ಬೋರ್ಡಿನ ಪರವಾಗಿಯಾಗಲಿ ಯಾವ ಗುತ್ತಿಗೆ ಅಥವಾ ಉದ್ಯೋಗದಲ್ಲಾದರೂ ಯಾವ ಭಾಗವನ್ನೊ ಅಥವಾ ಬಾಧ್ಯತೆಯನ್ನೊ, ಯಾವ ಮನುಷ್ಯನಾದರು ಒಂದು ಟ್ರಸ್ಟಿಯಾಗಿದ್ದು ಅಥವಾ ಬೋರ್ಡಿನ ಒಂದು ಉದ್ಯೋಗಸ್ಥ ಅಥವಾ ಸೇವಕನಾಗಿದ್ದು, ಪ್ರತ್ಯಕ್ಷವಾಗಿ ಅಥವಾ ಪರಭಾರೆಯಾಗಿ ಸಂಪಾದಿಸಿದ್ದಲ್ಲಿ, ಇಂಡಿಯನ್ ಪೀನಲ್ ಕೋಡಿನ 168ನೆ ಪ್ರಕರಣದಲ್ಲಿ ದಂಡನೆಗೆ ಗುರಿಮಾಡಲ್ಪಟ್ಟ ಅಪರಾಧವನ್ನು ಮಾಡಿರುತ್ತಾನೆಂಬದಾಗಿ ಎಣಿಸಲ್ಪಡತಕ್ಕದ್ದು;

ನಿಯಮ.

ಆದರೆ 8 (1) (d) ಪ್ರಕರಣದ (i), (ii) ಮತ್ತು (iii) ಮರಿ ಕಲಂಗಳಲ್ಲಿ ಹೇಳಲ್ಪಟ್ಟ ಯಾವದೊಂದು ವಿಷಯದಲ್ಲಾದರು ಒಬ್ಬ ಮನುಷ್ಯನು ಒಂದು ಭಾಗವನ್ನಾಗಲಿ ಅಥವಾ ಬಾಧ್ಯತೆಯನ್ನಾಗಲಿ ಉಂಟಾಗಿರೋಣವರ ಮಾತ್ರದಿಂದಲೇನೆ ಅಂಥಾ ಗುತ್ತಿಗೆಯ ಅಥವಾ ಉದ್ಯೋಗದಲ್ಲಿ ಭಾಗವನ್ನೊ ಅಥವಾ ಬಾಧ್ಯತೆಯನ್ನೊ ಉಂಟಾಗಿರುತ್ತಾನೆಂದು ಅವನು ಎಣಿಸಲ್ಪಡಕೂಡದು.

ಅನ್ಯಾಯವಾದ ಇನಾಂ ಅಥವಾ ಲಂಚವನ್ನು ತೆಗದುಕೊಳ್ಳುವದಕ್ಕೆ ದಂಡನೆ.

43. ಯಾವ ಮನುಷ್ಯನೆ ಆಗಲಿ ಈ ರೆಗ್ಯುಲೇಷನಿನಂತೆ ಉದ್ಯೋಗದಲ್ಲಿಡಲ್ಪಟ್ಟು, ಇಂಡಿಯನ್ ಪೀನಲ್ ಕೋಡಿನ 21ನೆ ಪ್ರಕರಣದ ಅರ್ಥದಲ್ಲಿ ಸರ್ಕಾರದ ಸೇವಕನಾಗಿಲ್ಲದೆ—ಯಾವ ಸರ್ಕಾರಿ ಕೆಲಸವನ್ನು ಮಾಡುವದಕ್ಕಾಗಿ ಯಾ ಮಾಡದೆ ಇರುವದಕ್ಕಾಗಿ, ಅಥವಾ ತನ್ನ ಸರ್ಕಾರಿ ಕೆಲಸಗಳನ್ನು ನಡಿಸುವದರಲ್ಲಿ ಯಾವ ಮನುಷ್ಯನಿಗಾದರೂ ಉಪಕಾರವನ್ನಾಗಲಿ ಯಾ ನಿಗ್ರಹವನ್ನಾಗಲಿ ಮಾಡುವದಕ್ಕಾಗಿ, ಅಥವಾ ಬೋರ್ಡಿನೊಂದಿಗೊ ಯಾ ಸರ್ಕಾರದ ಸೇವಕನಂತೆ ಒಬ್ಬ ಸರ್ಕಾರದ ಸೇವಕನೊಂದಿಗೊ ಯಾ ಗವರ್ನಮೆಂಟಿನವರೊಂದಿಗೊ ಯಾವ ಮನುಷ್ಯನಿಗಾದರೂ ಯಾವ ಉಪಕಾರವನ್ನಾಗಲಿ ಯಾ ವಿರೋಧವನ್ನಾಗಲಿ ಮಾಡುವದಕ್ಕಾಗಿ ಯಾ ಮಾಡಲು ಯತ್ನಿಸುವದಕ್ಕಾಗಿ, ತನಗೇನೊ ಯಾ ಇತರ ಮನುಷ್ಯನಿಗೇನೊ, ನ್ಯಾಯವಾದ ಇಷ್ಟಾಪೂರ್ತಿ ವಿನಹ, ಯಾವ ಪ್ರತಿ ಫಲವನ್ನಾಗಲಿ ಒಂದು ಬಹುಮಾನದಹಾಗೆ, ಯಾವ ಇತರ ಮನುಷ್ಯನಿಂದಲಾದರೂ, ಅಂಗೀಕರಿಸುತ್ತಾನೊ ಯಾ ಸಂಪಾದಿಸುತ್ತಾನೊ, ಅಥವಾ ಅಂಗೀಕರಿಸಲು ಒಪ್ಪುತ್ತಾನೊ ಯಾ ಸಂಪಾದಿಸಲು ಯತ್ನಿಸುತ್ತಾನೊ—ಅವನು, ಒಂದು ಸರ್ಕಾರದ ಸೇವಕನು ಅಂಥಾ ಅಪರಾಧವನ್ನೇ ಮಾಡಿರುವದಕ್ಕೆ ಇಂಡಿಯನ್ ಪೀನಲ್ ಕೋಡಿನಲ್ಲಿ ಯಾವ ದಂಡನೆಗೆ ಗುರಿಮಾಡಲ್ಪಡುತ್ತಾನೊ ಅದೆ ದಂಡನೆಗೆ ಗುರಿಯಾಗಿರತಕ್ಕದ್ದು.

ಅಪರಾಧಗಳನ್ನು ಹಿಡಿಯೋಣ.

44. (1) ಈ ರೆಗ್ಯುಲೇಷನಿಗೆ ವಿರೋಧವಾಗಿಯಾಗಲಿ ಅಥವಾ ಅದರಂತೆ ಮಾಡಲ್ಪಟ್ಟ ಯಾವ ನೇಮಕ್ಕೆ ಅಥವಾ ಬಳನಿಬಂಧನೆಗೆ ವಿರೋಧವಾಗಿಯಾಗಲಿ ಇರುವ ಎಲ್ಲಾ ಅಪರಾಧಗಳು ಸಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟಿನ ಅಧಿಕಾರಗಳಿಗೆ ಕಮ್ಮಿ ಇಲ್ಲದ ಅಧಿಕಾರಗಳುಳ್ಳ ಯಾವ ಮ್ಯಾಜಿಸ್ಟ್ರೇಟನಿಂದಾಗಲಿ ಹಿಡಿಯಲ್ಪಡತಕ್ಕದ್ದು.

ಜುಲುಮಾನೆ ವಸೂಲಿಗಳು ಇಂಪ್ರೂವ್‌ಮೆಂಟ್ ಫಂಡಿನ ಜಮೆಗೆ ಬರತಕ್ಕದ್ದು.

(2) ಅಪರಾಧಿಯಿಂದ ವಸೂಲ್ಮಾಡಲ್ಪಟ್ಟ ಎಲ್ಲಾ ಜುಲುಮಾನೆ ಹಣಗಳು ಸಿಟಿ ಆಫ್ ಮೈಸೂರು ಇಂಪ್ರೂವ್‌ಮೆಂಟ್ ಫಂಡಿನ ಜಮೆಗೆ ಬರತಕ್ಕದ್ದು.

ಇಂಪ್ರೂವ್‌ಮೆಂಟ್ ಫಂಡಿಗೆ ಸಲ್ಲತಕ್ಕ ಹಣಗಳ ವಸೂಲಿ.

45. ಬೋರ್ಡಿಗೆ ಕೊಡಲ್ಪಟ್ಟ ಅಥವಾ ಬೋರ್ಡಿನಿಂದ ಸಂಪಾದಿಸಲ್ಪಟ್ಟ ಸ್ವತ್ತಿನ ಬಾಡಿಗೆಗಳು, ಆದಾಯಗಳು, ಅಥವಾ ಕ್ರಯ ಹುಟ್ಟುವಳಿಗಳು, ಇವುಗಳಿಗೋಸ್ಕರವಾಗಿಯಾಗಲಿ, ಅಥವಾ ಇತರ ಯಾವ ವಿಧವಾಗಿಯಾಗಲಿ, ಯಾವ ಮನುಷ್ಯನಿಂದಲಾದರೂ ಸಲ್ಲತಕ್ಕದ್ದಾಗಿದ್ದು, ಮತ್ತು ಚೇರ್‌ಮೆನ್ನಿನ ತಗಾದೆ ನೋಟಿಸು ಅಂಥಾ ಮನುಷ್ಯನ ಮೇಲೆ ಜಾರಿಯಾದ ತಾರೀಖಿನಿಂದ 15 ದಿವಸಗಳಾದ ಬಳಿಕ ಬಾಕಿಯುಳ್ಳಿರುವ ಎಲ್ಲಾ ಹಣಗಳನ್ನು ಈ ಕೆಳಗೆ ಬರುವ ಮಾರ್ಗಗಳ ಪೈಕಿ ಯಾವದೊಂದು ಮಾರ್ಗದಿಂದಾಗಲಿ ಅಥವಾ ಅಧಿಕ ಮಾರ್ಗಗಳಿಂದಾಗಲಿ ವಸೂಲು ಮಾಡಲ್ಪಡಬಹುದು, ಏನಂದರೆ — (1) ಯಾವ ಡಿಸ್ಟ್ರಿಕ್ಟನಲ್ಲಿ ವ್ಯವಹಾರ ನಡಿಸಬೇಕಾಗಿದೆಯೊ ಅಲ್ಲಿನ ಡೆಪ್ಯುಟಿ ಕಮಿಷನರಿಗೆ ಚೇರಮೆನ್ನು ಬರಹಮೂಲಕ ಎಪ್ಲಿಕೇಷನು ಮಾಡಿದ ನಂತರ, ನೆಲಕಂದಾಯದ ನಿಲುವಿನೋಪಾದಿಯಲ್ಲಿ; (2) ಚೇರಮೆನ್ನಿನಿಂದಾಗಲೀ ಚೇರ್‌ಮೆನ್ನಿನ ಹುಕುಮಿನಂತಾಗಲೀ ಅಂಥಾ ಮನುಷ್ಯನ ಚರಸ್ವತ್ತಿನ ಜಫ್ತಿ, ಮಾರಾಟ, ಇವುಗಳಿಂದ; (3) ಅಂಥಾ ಮನುಷ್ಯನ ಮೇಲೆ ಚೇರಮೆನ್ನು ಸಿವಿಲ್ ದಾವೆ ಮಾಡುವದರಿಂದ.

ದಾವೆಗಳಿಗೆ ಲಿಮಿಟೇಷನ್.

46. (1) ಈ ರೆಗ್ಯುಲೇಷನ್ ಪ್ರಕಾರ, ಅಥವಾ ಅದರಂತೆ ಆದ ಒಂದು ನಿಯಮ ಯಾ ಬಳನಿಬಂಧನೆಯ ಪ್ರಕಾರ, ಮಾಡಲ್ಪಟ್ಟ ಅಥವಾ ಮಾಡಲ್ಪಟ್ಟದ್ದಾಗಿ ಭಾವವಾಗುವ ಯಾವದಕ್ಕೋಸ್ಕರವಾಗಿಯಾದರೂ ಯಾರಮೇಲೆ ವ್ಯವಹಾರವೊ ಅಂಥಾ ಮನುಷ್ಯನಿಗೆ, ಉದ್ದೇಶಿಸಲ್ಪಟ್ಟ ವ್ಯಾಜ್ಯವನ್ನು ಮತ್ತು ವ್ಯಾಜ್ಯಕಾರಣವನ್ನು ಕುರಿತು ಬರಹಮೂಲಕವಾದ ನೋಟಿಸ್ ಹಾವತಿ ಮಾಡಿದ ತರುವಾಯ ಒಂದು ತಿಂಗಳು ಕಳೆದ ಹೊರ್ತು, ಅಥವಾ ಅಂಥಾ ವ್ಯಾಜ್ಯಕಾರಣ ಹುಟ್ಟಿದ ಆರು ತಿಂಗಳ ಬಳಿಕ, ಅಥವಾ ಸಾಕಾದ ನಷ್ಟ ಪರಿಹಾರದ್ರವ್ಯ ಕೊಡಲ್ಪಟ್ಟ ಬಳಿಕ, ಅಂಥಾ ಮನುಷ್ಯನ ಮೇಲೆ ಯಾವ ವ್ಯವಹಾರವು ತರಲ್ಪಡಲಾಗದು.

(2) ಬೋರ್ಡಿನವರಮೇಲಾಗಲಿ, ಯಾವ ಟ್ರಸ್ಟಿಯಮೇಲಾಗಲಿ ಅಥವಾ ಬೋರ್ಡಿನ ಉದ್ಯೋಗಸ್ಥ ಯಾ ಸೇವಕನಮೇಲಾಗಲಿ, ಈ ರೆಗ್ಯುಲೇಷನ್ನ ಪ್ರಕಾರವಾಗಿಯಾದರೂ ಅಥವಾ ಅದರಂತೆಯಾದ ಯಾವ ನೇಮದ ಯಾ ಬೈಲಾ ನಿಬಂಧನೆಯ ಪ್ರಕಾರವಾಗಿಯಾದರೂ ಅವನಿಂದಲೋ ಯಾ ಅವರಿಂದಲೋ, ಶ್ರದ್ಧೆಯಿಂದಲೂ ಮತ್ತು ಲಕ್ಷ್ಯದಿಂದಲೂ ಮಾಡಲ್ಪಟ್ಟ ಯಾವ ಕಾರ್ಯಕ್ಕೋಸ್ಕರವೂ ಕೂಡ ನಷ್ಟಕ್ಕೆ ವ್ಯವಹಾರವು ತರಲ್ಪಡಲಾಗದು.

ನಷ್ಟಪರಿಹಾರದ್ರವ್ಯಗಳಿಗಾಗಿ ದಾವೆ ಮಾಡಲು ಅಡ್ಡಿ ಇರುವ ಸಂದರ್ಭಗಳು.

ಪಿ. ಎನ್. ಕೃಷ್ಣಮೂರ್ತಿ,
ಮೈಸೂರು ಸೀಮೆಯ ದಿವಾನರು.

ಈ ರೆಗ್ಯುಲೇಷನ್ನಿನ ಉದ್ದೇಶಗಳು ಮತ್ತು ಕಾರಣಗಳು—ಇವುಗಳ ವಿವರ.

G. O. No. 4168–79—L. F. 36–02, dated 18th September 1902.

1902ನೆ ವರುಷದ ಸೆಪ್ಟಂಬರ್ ತಿಂಗಳಲ್ಲಿ ಗವರ್ನಮೆಂಟಿನವರು ಮೈಸೂರು ಪಟ್ಟಣವನ್ನು ಉತ್ತಮಪಡಿಸುವದಕ್ಕೋಸ್ಕರ ಒಂದು ಉಪಾಯವನ್ನು ಮಾಡುವದಕ್ಕಾಗಿ ಒಂದು ಕಮ್ಮಿಟಿಯನ್ನು ಏರ್ಪಡಿಸಿ, ಅದರ ಕಾರಣಗಳನ್ನು ತಮ್ಮ ನೇಮಕದಲ್ಲಿ ಈರೀತಿಯಾಗಿ ವ್ಯಕ್ತಪಡಿಸಿದರು :—

"ಮೈಸೂರು ಪಟ್ಟಣವನ್ನು ಉತ್ತಮಪಡಿಸುವದಕ್ಕೋಸ್ಕರ ಬಹಳ ಹಣಗಳು ಖರ್ಚುಮಾಡಲ್ಪಟ್ಟಾಗ್ಯೂ ಅದು, ಪರಂಪರೆಯಾಗಿ ಬರುವ ಪ್ರತಿ ಒಂದು ವರುಷದಲ್ಲಿಯೂ ಪ್ಲೇಗ್ ಉಪಾಧಿಗೆ ಇನ್ನೂ ಗುರಿಯಾಗಿರುವದು, ದುರ್ದಶೆಯಾಗಿದೆ. ಆ ಸ್ಥಳದ ಆರೋಗ್ಯವನ್ನು ಸ್ಥಿರಪಡಿಸುವದಕ್ಕೆ, ಆರೋಗ್ಯ ರಕ್ಷಣಕರವಾದ ತಿದ್ದುಪಾಟುಗಳನ್ನು ಶ್ರದ್ಧೆಯಿಂದ ಆಲೋಚಿಸಿ, ಅವಿಚ್ಛಿನ್ನವಾದ ಪ್ರಯತ್ನಗಳಪೂರ್ವಕ ಅವಲಂಬಿಸುವದು ವಿನಹ ಬೇರೆ ಯಾವ ಉಪಾಯವೂ ಇಲ್ಲವೆಂದು, ಗವರ್ನಮೆಂಟಿನವರು ಅಭಿಪ್ರಾಯ ಪಡುತ್ತಾರೆ. ಕೇವಲ ಒತ್ತಾಗಿ ವಸಿಸಲ್ಪಟ್ಟ ಪ್ರದೇಶಗಳನ್ನು ಬೈಲು ಮಾಡುವದರಲ್ಲಿ ಮನೆಗಳನ್ನು ಕೆಡವುವುದು ಜನಗಳನ್ನು ಆಸರೆ ಇಲ್ಲದೆ ತಿರುಗುವಹಾಗೆ ಮಾಡುವದುಮಾತ್ರವೆ ಅಲ್ಲದೆ, ಪಟ್ಟಣವನ್ನು ಸರಿಯಾಗಿ ವಿಸ್ತರಿಸಿ ಮನೆಗಳನ್ನು ಕಟ್ಟುವದಕ್ಕೆ ಅನುಕೂಲಗಳನ್ನು ಹೊಂದಿಸಿ ಕೊಡುವದೂ ಸಹ ಆಗಬೇಕಾಗಿದೆ. ಆ ಪಟ್ಟಣವನ್ನು ಉತ್ತಮಪಡಿಸುವದಕ್ಕೋಸ್ಕರ ಅವಶ್ಯಕವಿರುವ ಹಣವನ್ನೆಲ್ಲಾ ಮ್ಯೂನಿಸಿಪಾಲಿಟಿಯವರು ಒದಗಿಸುವದು ಅಸಾಧ್ಯವಾಗಿ ಕಾಣಬರುತ್ತೆ. ದೇಶಕ್ಕೆಲ್ಲಾ ಪ್ರಧಾನಪಟ್ಟಣವಾಗಿರುವದರಿಂದ ಅದಕ್ಕೆ ಉಂಟಾದ ಮಹತ್ವವನ್ನು ಆಲೋಚನೆಗೆ ತೆಗದುಕೊಂಡು, ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರು, ಅಂಥಾ ವಿಶೇಷ ಧನವ್ಯಯದಲ್ಲಿ ಅಧಿಕಾಂಶವು ದೇಶಕ್ಕೆಲ್ಲಾ ಸೇರುವದು ಉಚಿತವೆಂದು ಎಣಿಸುತ್ತಾರೆ. ಅಗತ್ಯವಾಗಿರುವ ಖರ್ಚಿಗೋಸ್ಕರ ಎಷ್ಟುಮಟ್ಟಿಗೆ ಮ್ಯೂನಿಸಿಪಲ್ ಉಪಪತ್ತಿಗಳಿಂದ ಸಹಾಯವು ನ್ಯಾಯವಾಗಿ ನಿರೀಕ್ಷಿಸಲ್ಪಡಬಹುದಾದ್ದನ್ನು ಗೊತ್ತು ಮಾಡುವದು, ವ್ಯಯಮಾಡಬೇಕಾದ ಒಟ್ಟು ಹಣವೇನೆಂಬುವದನ್ನು ಸುಮಾರಾಗಿ ತಿಳದಮೇಲೇನೆ, ಶಕ್ಯವಾಗುತ್ತೆ."

"ಆ ಉಪಾಯವು ಪುನರ್ವಿಚಾರವಿಲ್ಲದಂತೆ ಈಗಲೇನೆ ಸಂಪೂರ್ಣವಾಗಿ ಆಲೋಚಿಸಲ್ಪಟ್ಟು ಪಕ್ವಪಡಿಸಲ್ಪಡಬಹುದು. ಬೇಕಾದ ಹಣವನ್ನೆಲ್ಲಾ ಒಂದೇ ಕಾಲವಲ್ಲಿ ಒದಗಿಸುವದು ಸರ್ಕಾರಕ್ಕೂ ಕೂಡ ಅಶಕ್ಯವಾಗಿರುವದು ; ಆದರೆ ಅದರ ವ್ಯಯವು ಕೆಲವು ವರುಷಗಳಕಾಲಕ್ಕೆಲ್ಲಾ ಪ್ರವರ್ತಿಸುವಂತೆ ಮಾಡಬಹುದು."

"ತಿದ್ದುಪಾಟುಗಳು ಪ್ರಯೋಜನಕರವಾಗಿ ಉದ್ದೇಶಿಸಲ್ಪಡತಕ್ಕಂಥಾ ಸಾಧಾರಣರೀತಿ ಏನಂದರೆ :—ಪಟ್ಟಣದ ಹೊಲಗೇರಿಗಳನ್ನು ಎಲ್ಲೆಲ್ಲಿದ್ದರೂ ಮೊದಲು ಉತ್ತಮಪಡಿಸುವದರಲ್ಲಿ, ಆರೋಗ್ಯ ಹಾನಿಕರವಾದ ಕಟ್ಟಡಗಳನ್ನೆಲ್ಲಾ ಕೆಡವಿ, ಮಿತಿಮೀರಿ ಗುಂಪುಗುಂಪಾಗಿರೋಣವನ್ನು ನಿಷೇಧಿಸಿ, ಕೆಟ್ಟ ಬಚ್ಚಲುಗಳನ್ನ ಇರದಂತೆ ಮಾಡಿ ಮತ್ತು ಅಪೂರ್ಣವಾಗಿರುವ ಆರೋಗ್ಯ ರಕ್ಷಣೆಯನ್ನು ಪೂರಯಿಸಬೇಕು. ಅಂಥಾ ಪ್ರದೇಶಗಳಿಂದ ಹೊರಡಿಸಲ್ಪಟ್ಟ ಹೆಚ್ಚು ಜನಗಳಿಗೆ ಸರಿಯಾದ ಸ್ಥಳಗಳನ್ನು ಒದಗಿಸಿಕೊಡಬೇಕು ; ಮತ್ತು ಬಡವರಿಗೆ ಸರಿಯಾದ ಮನೆಗಳನ್ನು ಕಟ್ಟಿಕೊಳ್ಳುವದಕ್ಕೋಸ್ಕರ, ಸಾಧ್ಯವಾದ ಮತ್ತು ತಕ್ಕಮಟ್ಟಿಗೆ ಉಪಯೋಗಕರವಾದ ಸಹಾಯವನ್ನ ಮಾಡಬೇಕು. ಸರಿಯಾಗಿ ನೀರು ಹರಿಯತಕ್ಕ ಬಚ್ಚಲು ಸಮುದಾಯವನ್ನ ಕುರಿತು ಒಂದು ವಿಪುಲವಾದ ಉಪಾಯವನ್ನು ಕಲ್ಪಿಸಬೇಕಾಗಿರುತ್ತೆ. ಆದರೆ ಈ ಪ್ರಯತ್ನದಲ್ಲಿ ಪಟ್ಟಣದ ಅಗತ್ಯಗಳನ್ನು ತಕ್ಕಷ್ಟು ಮಟ್ಟಿಗೆ ಹೊಂದಿಸಿಕೊಡುವದು ಪ್ರಧಾನವಾಗಿರಬೇಕೇ ಹೊರ್ತು, ಭಾವಕಲ್ಪಿತವಾಗಿದ್ದಾಗ್ಯೂ ಅಪ್ರಯೋಜಕವಾಗಿರುವ ಲೋಪರಹಿತತ್ವವನ್ನ ಅವಶ್ಯವಾಗಿ ಸಾಧಿಸಬೇಕಾದ್ದೇನು ಇಲ್ಲ.

"ಇವುಗಳೆಲ್ಲಾ ಸಾಮಾನ್ಯವಾದ ನಿರೂಪಣೆಗಳು ; ಆದರೆ ಗವರ್ನಮೆಂಟಿನವರು ಏರ್ಪಡಿಸಬೇಕೆಂದು ಸಂಕಲ್ಪಿಸಿರುವ ಕಮಿಟಿಯವರಿಗೆ, ಈ ವಿಷಯದ ಶಾಸ್ತ್ರೋಕ್ತವಾಗಿಯೂ ಅಭ್ಯಾಸಸಿದ್ಧವಾಗಿಯೂ ಇರುವ ವಿವಿಧಾಕೃತಿಗಳನ್ನೆಲ್ಲಾ ಚೆನ್ನಾಗಿಯೋಚಿಸಿ, ತಕ್ಕಷ್ಟು ವಿವರವಾಗಿ ಒಂದು ಉಪಾಯವನ್ನು ಗವರ್ನಮೆಂಟಿನವರ ಆಲೋಚನೆ ಬಗ್ಗೆ ಮಾಡುವದು, ಕರ್ತವ್ಯವಾಗಿರುತ್ತೆ. ಕೆಳಗೆ ಹೆಸರು ಹೇಳಲ್ಪಟ್ಟ ಪ್ರೆಸಿಡೆಂಟರು ಮತ್ತು ಮೆಂಬರುಗಳು, ಸಾಧ್ಯವಾದಷ್ಟು ತ್ವರಿಯುವಾಗಿ ಈ ಕೆಲಸದಲ್ಲಿ ಪ್ರವರ್ತಿಸಿ ತಮ್ಮ ಅಭಿಪ್ರಾಯಗಳನ್ನೂ, ಬಹುಮಟ್ಟಿಗೆ ತಪ್ಪಿಲ್ಲದಿರುವ ವೆಚ್ಚದ ಮಡಿಪನ್ನೂ ಸಹ ಒಪ್ಪಿಸಬೇಕೆಂದು ಗವರ್ನಮೆಂಟಿನವರು ಕೋರುತ್ತಾರೆ. ಯಾವ ಕ್ರಮದಲ್ಲಿ, ಯಾವ ವಿಧಾನದಲ್ಲಿ, ಆ ಉಪಾಯವನ್ನ ನೆರವೇರಿಸುವದು ತಮ್ಮ ಅಭಿಪ್ರಾಯದಲ್ಲಿ ಉತ್ತಮವಾಗಿ ತೋರಿಬರುವದನ್ನ ಕೂಡ ಅವರು ಸೂಚಿಸಬೇಕು."

ಅದೇ ಪ್ರಕಾರ, ಪಟ್ಟಣದ ಅನೇಕ ಭಾಗಗಳಲ್ಲಿ ಮಾಡಬೇಕಾದ್ದೆಂದು ತಾವು ಅಭಿಪ್ರಾಯಪಟ್ಟಿರುವ ತಿದ್ದುಪಾಟುಗಳನ್ನೆಲ್ಲಾ ತೋರಿಸಿ ವಿಸ್ತಾರವಾದ ಭಾವಗಳನ್ನನುಸರಿಸಿರತಕ್ಕ ಕೆಲವು ಉಪಾಯಗಳನ್ನು, ಕಮಿಟಿಯವರು ಒಪ್ಪಿಸಿರುತ್ತಾರೆ. ಆ ಉಪಾಯಗಳು ಈಗ ಗವರ್ನಮೆಂಟಿನವರ ವಿಚಾರಣೆಯಲ್ಲಿ ಇವೆ.

ಆ ಒಟ್ಟು ಉಪಾಯವನ್ನು ಯೋಚಿಸಿದರೆ ಅದರಲ್ಲಿ,—ಹೊಸ ಬೀದಿಗಳನ್ನು ಮಾಡುವದು, ಇರುವ ಬೀದಿಗಳನ್ನು ಬದಲಾಯಿಸುವದು, ಅನಾರೋಗ್ಯವಾದ ಕಟ್ಟಡಗಳನ್ನು ತೆಗೆದುಹಾಕುವದು ಅಥವಾ ಬದಲಾಯಿಸುವದು, ಸರಿಯಾದ ಬಚ್ಚಲುಗಳನ್ನೂ ಮತ್ತು ಹೆಚ್ಚಾಗಿ ಗಾಳಿಬೀಸುವದಕ್ಕೂ ವಿಹಾರ ವಿಶ್ರಮಕ್ಕೂ ಬೇಕಾದ ಬೈಲುಭೂಮಿಗಳನ್ನು ಏರ್ಪಡಿಸುವದು, ಆ ಉಪಾಯವನ್ನು ನೆರವೇರಿಸುವದರಲ್ಲಿ ಸ್ಥಳ ತಪ್ಪಿಸಲ್ಪಟ್ಟ ಕೇವಲ ಬಡವರಿಗೂ ಕೂಲಿ ಮಾಡುವ ಜನಗಳಿಗೂ ಆರೋಗ್ಯರಕ್ಷಕವಾದ ಮನೆಗಳನ್ನು ಕಟ್ಟಿಸುವದು—ಇವುಗಳೆಲ್ಲಾ ಅಡಗಿರುತ್ತವೆ.

ಆ ಉಪಾಯವನ್ನು ಜಾರಿಗೆ ತರುವದಕ್ಕಾಗಿ ಅನೇಕ ಗತ್ಯಂತರಗಳು ತೋರಿಬರುತ್ತವೆ. ಆ ಕೆಲಸವನ್ನು ಕೆಳಗೆ ಬರುವ ಯಾವ ಅಧಿಕಾರಿಗಳಿಗಾಗಲಿ, ಅಥವಾ ಅವರ ಪೈಕಿ ಜೊತೆ ಮಾಡಲ್ಪಟ್ಟ ಕೆಲವರಿಗಾಗಲಿ ಕೊಡಬಹುದು : ಯಾತಂದರೆ, ಡೆಪ್ಯುಟಿ ಕಮಿಷನರು, ಡಿಸ್ಟ್ರಿಕ್ಟ್ ಆಫಿಸರುಗಳು, ಸಿಟಿ ಮ್ಯುನಿಸಿಪಾಲಿಟಿಯವರು, ಆ ಉದ್ದೇಶಕಾಗಿ ಪ್ರತ್ಯೇಕವಾಗಿ ನೇಮಿಸಲ್ಪಟ್ಟ ಒಬ್ಬ ಆಫೀಸರು, ಅಥವಾ ಪಬ್ಲಿಕ್ ವರ್ಕ್ಸಿ ಡಿಪಾರ್ಟುಮೆಂಟಿನವರು. ಪರಂತು ಈ ಯಾವ ಸಂದರ್ಭದಲ್ಲಾಗಲಿ ಇವರನ್ನು ಪ್ರತ್ಯೇಕವಾಗಿ ಅಥವಾ ಜೊತೆಯಾಗಿ ಈ ಕೆಲಸದಲ್ಲಿ ಬಿಡುವದಕ್ಕೆ ಅಭ್ಯಂತರಗಳು ಇರುತ್ತವೆ. ಮ್ಯುನಿಸಿಪಲ್ ಸಿಬ್ಬಂದಿಗೆ ತಾವು ವಾಡಿಕೆಯಾಗಿ ಮಾಡುವ ಉದ್ಯೋಗವೇ ಸಂಪೂರ್ಣವಾಗಿದೆ. ಮ್ಯುನಿಸಿಪಲ್ ಕಮಿಷನರುಗಳು ಪುರಸತ್ತಾಗಿರುವ ಕಾಲವು ಕೇವಲ ಸಂಕೋಚವಾಗಿರುವದರಿಂದ, ಅವರಿಗೆ ಅಧಿಕ ಕಾರ್ಯವನ್ನುಂಟುಮಾಡುವದು ಅನುಚಿತವಾಗಿರುತ್ತೆ. ಡೆಪ್ಯುಟಿ ಕಮಿಷನರ ವಿಷಯದಲ್ಲಿಯೂ, ಅವರ ಅಸಿಸ್ಟೆಂಟರುಗಳ ವಿಷಯದಲ್ಲಿಯೂ, ಇದೇ ಅಭ್ಯಂತರಗಳು ಇನ್ನು ಅಧಿಕವಾಗಿ ಪ್ರಯೋಗವಾಗುತ್ತವೆ. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಆ ಉಪಾಯದ ಇಂಜನೀರಿನ ಭಾಗವೆಲ್ಲಾ ಸುಧಾರಿಸಿಕೊಳ್ಳಬಹುದು. ಆದರೆ ಆ ಇಂಜನೀರಿನ ಭಾಗವು ಅತ್ಯಂತ ಕಷ್ಟವಾದ್ದಾಗಿಯೇ ಆಗಲಿ ಅಥವಾ ಕೇವಲ ವಿಶೇಷವಾದ್ದಾಗಿಯೇ ಆಗಲಿ ಇರುವದಿಲ್ಲಾ. ಆಲೋಚಿಸತಕ್ಕದ್ದಾಗಿರುವ ಕಾರ್ಯಭಾರಿಕ ವಿಷಯಗಳಲ್ಲದೆ ಅರ್ಥನಿರ್ವಾಹ ಕ್ರಮ ಸಮ್ಮಂಧಪಟ್ಟ ಸಂಗತಿಗಳು ಕೂಡ ಸರ್ಕಾರಿ ಮತ್ತು ಖಾಸಗಿ ಹಕ್ಕುಗಳನ್ನು ಬಹಳವಾಗಿ ನಿರ್ವಹಿಸೋಣದರಲ್ಲಿ ಅನಂತವಾಗಿ, ಅಡಗಿಕೊಂಡಿವೆ. ಅಂಥಾ ವಿಚಾರಗಳನ್ನು ನಡಿಸುವದು ಮಾತ್ರವಲ್ಲದೆ ಜನಗಳನ್ನು ಆರೋಗ್ಯ ರಕ್ಷಣಾಧಿಕ್ಯವುಳ್ಳಪ್ರದೇಶಗಳಲ್ಲಿ ವಸಿಸುವ ಹಾಗೆ ಮಾಡುವದು ಕೂಡ ಆಗಬೇಕಾಗಿದೆ. ಪ್ರತ್ಯೇಕವಾಗಿ ನೇಮಕವಾದ ಒಬ್ಬ ಉದ್ಯೋಗಸ್ಥನಿಗೆ ಅಂಥಾ ಭಾರವನ್ನ ವಹಿಸುವದು ಅಪೇಕ್ಷಿಸತಕ್ಕದ್ದಾಗಿಲ್ಲ. ಈ ಪ್ರಯತ್ನದ ಕಾರ್ಯಸಿದ್ಧಿಗಾಗಿ, ಸಾಕ್ಷಾತ್ತಾಗಿ ಸಮ್ಮಂಧಪಡುವವರು ಮಾತ್ರವಲ್ಲದೆ ಸರ್ವಜನರು ಕೂಡ ಸಾಧ್ಯವಿರುವ ಮಟ್ಟಿಗೆ ಏಕೀಭವಿಸಿರಬೇಕಾದ್ದು ಅವಶ್ಯವಾಗಿದೆ. ಅಂಥಾ ಸಹಾನುಭವವು ಬರೀ ಸರ್ಕಾರಿ ಕರ್ತೃತ್ವದಿಂದ ಸಾಧಿಸಲಶಕ್ಯವು. ಅದೂ ಅಲ್ಲದೆ, ಕಾರ್ಯಸಾಧಕವಾದ ಆಡಳಿತವು, ತೀವ್ರವಾಗಿ ನಡಿಸತಕ್ಕ ಚರ್ಯೆಯು, ಬೇಕಾಗಿರುವದರಿಂದ, ಒಪ್ಪಿಸಲ್ಪಟ್ಟ ಕೆಲಸದಲ್ಲಿ ತಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಉಪಯೋಗಿಸಲು ತಕ್ಕಷ್ಟು ಅವಕಾಶವುಳ್ಳ ಬೇರೆ ಒಂದು ಸಿಬ್ಬಂದಿಯೊಡನೆ ಒಂದು ಪ್ರತ್ಯೇಕ ಪಾರುಪತ್ಯವನ್ನ ಏರ್ಪಡಿಸುವದು ವಿಧಿರೂಪವಾಗಿ ತೋರುತ್ತೆ.

ಇಂಥಾ ವಿದ್ಯಮಾನಗಳಲ್ಲಿ, ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ ಗವರ್ನಮೆಂಟಿನವರು, ಬೊಂಬಾಯಿ ಗವರ್ನಮೆಂಟಿನವರು ಅವಲಂಬಿಸಿರುವ ಮಾರ್ಗವನ್ನೇ ಉದಾಹರಣೆಯಾಗಿ ತೆಗೆದುಕೊಂಡು, "ಮೈಸೂರು ಪಟ್ಟಣವನ್ನು ಉತ್ತಮಪಡಿಸುವದಕ್ಕೋಸ್ಕರವಾದ ಟ್ರಸ್ಟೀಗಳ ಬೋರ್ಡು" ಎಂದು ಕರಿಯಲ್ಪಡಬೇಕಾದ ಒಂದು ಚಿಕ್ಕ ಪಾರುಪತ್ಯವನ್ನು, ಅವರ ವಶಕ್ಕೆ ಕೊಡಲ್ಪಟ್ಟ ಹಣಗಳನ್ನು ಉಪಯೋಗಿಸುವದಕ್ಕೂ, ಸ್ವತ್ತನ್ನ ಸಂಪಾದಿಸಿ ನಿರ್ವಹಿಸುವದಕ್ಕೂ, ಮತ್ತು ಅವಶ್ಯವಾದ ಉತ್ತಮಪಡಿಸುವ ಕೆಲಸಗಳನ್ನು ನೆರವೇರಿಸುವದಕ್ಕೂ ಪ್ರತ್ಯೇಕ ಅಧಿಕಾರಗಳನ್ನುಳ್ಳದ್ದಾಗಿ ಏರ್ಪಡಿಸಲು, ನಿಶ್ಚಯಿಸಿರುತ್ತಾರೆ. ಚಲಾವಣೆ ಬಗ್ಗಾಗಿ ಬೇಕಾದ ಅಧಿಕಾರಗಳೆಲ್ಲ ಇದರೊಂದಿಗಿರುವ ರೆಗ್ಯುಲೇಷನಿನಲ್ಲಿ ನಮೂದಾಗಿರುತ್ತವೆ. ಈ ರೆಗ್ಯುಲೇಷನು ಸಾಧಾರಣವಾಗಿ 1898ನೆ ವರುಷದ 4ನೆ ನಂಬರಿನ ಬೊಂಬಾಯಿ ಆಕ್ಟನ್ನು ಹೆಚ್ಚುಕಮ್ಮಿಯಾಗಿ ಅನುಸರಿಸುವದಲ್ಲದೆ, ಕೆಲವು ವಿಶೇಷವಾದ ವಿಚಾರಗಳಲ್ಲಿ ಅದಕ್ಕೆ ವ್ಯತ್ಯಾಸವಾಗಿಯು ಇದೆ. ಅದು ಹ್ಯಾಗೆಂದರೆ, ನಡಿಸುವ ರೀತಿಯು ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಿ ಸುಲಭಮಾಡಿರುತ್ತೆ ; ನಗದಿಯಾತಿಗೆ ಸಮ್ಮಂಧಪಡುವ ನಿಯಮಗಳು (ಸಂದರ್ಭಕ್ಕೆ ತಕ್ಕಹಾಗಿರಬೇಕಾದ್ದರಿಂದ) ಸಂಪೂರ್ಣವಾಗಿ ಬೇರೆ ಮಾರ್ಗವನ್ನು ಅವಲಂಬಿಸುತ್ತವೆ ; ಮತ್ತು, ಒಂದು ಪಕ್ಷದಲ್ಲಿ ಗವರನ್ಮೆಂಟಿನವರು ಬೋರ್ಡಿನ ಮೇಲೆ ಸಾಧಾರಣವಾದ ಮೇಲ್ವಿಚಾರಣೆಯನ್ನು ಅಧಿಕವಾಗಿ ಮಾಡಬಹುದಾದ ಸ್ಥಿತಿಯಲ್ಲಿರುವದಲ್ಲದೆ, ಮತ್ತೊಂದುಪಕ್ಷದಲ್ಲಿ ಬೋರ್ಡಿನ ಅಧಿಕಾರಗಳನ್ನೆಲ್ಲ ಕೆಲವು ಪ್ರಕರಣಗಳಲ್ಲಿ ಹೆಚ್ಚಿಸಿರುತ್ತೆ. (ಕಟ್ಟಡಗಳ ನಿರ್ಮಾಣವನ್ನು ಕ್ರಮಪಡಿಸೋಣ, ಮನೆ ಕಟ್ಟುವದ

ಕ್ಕೆ ಮುಂಗಡಗಳನ್ನು ಕೊಡೋಣ, ಸಲ್ಲತಕ್ಕ ಹಣಗಳನ್ನು ವಸೂಲ್ ಮಾಡೋಣ, ಇವುಗಳೇ ಮುಂತಾದ ಪ್ರಕರಣಗಳು) ಬೋರ್ಡಿನ ಅಗಲಿಕೆಯು ಸಂಭವಿಸುವದನ್ನು ಕೂಡಾ ಯೋಚಿಸಿರುವದಲ್ಲದೆ ಅದಕ್ಕೆ ಉಪಾಯುವನ್ನು ಮಾಡಿರುತ್ತೆ.

ಆಮೇಲೆ ಈ ರೆಗ್ಯುಲೇಷನಿನ ತಪಸೀಲುಗಳನ್ನು ಕುರಿತು :

Iನೆ ಅಧ್ಯಾಯ (1 ಮತ್ತು 2ನೆ ಪ್ರಕರಣಗಳು) ಅವತರಣಿಕೆ : ಇದರ ವಿವರ ಬೇಕಾಗಿಲ್ಲ.

IIನೆ ಅಧ್ಯಾಯುವು (ಪ್ರಕರಣಗಳು 3ನಿಂದ 13ವರಿಗೆ). ಟ್ರಸ್ಟಿಗಳ ಬೋರ್ಡಿನ ಏರ್ಪಾಟನ್ನೂ, ಅವರ ನಡವಳಿಕೆಗಳನ್ನೂ ಮತ್ತು ಚೇರಮೆನ್‌ನಿನ ಕರ್ತ್ತವ್ಯಗಳನ್ನೂ ಕುರಿತು ಇದೆ. 4ನೆ ಪ್ರಕರಣದಲ್ಲಿ, ಆ ಟ್ರಸ್ಟಿಗಳ ಬೋರ್ಡಿನಂತಿರುವ ಒಂದು ಚಿಕ್ಕ ಪಾರುಪತ್ಯವನ್ನು, ಸಾಧ್ಯವಿರುವ ಮಟ್ಟಿಗೂ, ಎಲ್ಲಾ ಬಗೆಯಾದ ಸ್ವಾರ್ಥಗಳನ್ನುಳ್ಳವರ ಪ್ರತಿನಿಧಿಯಾಗಿರುವ ಹಾಗೆ, ಏರ್ಪಡಿಸಿರುತ್ತೆ.

IIIನೆ ಅಧ್ಯಾಯುವು (ಪ್ರಕರಣಗಳು 14ರಿಂದ 23ವರಿಗೆ) ಬೋರ್ಡಿನ ಕರ್ತ್ತವ್ಯಗಳನ್ನು ಮತ್ತು ಅಧಿಕಾರಗಳನ್ನು ಕುರಿತು ಇದೆ. ಇಂಪ್ರೂವ್‌ಮೆಂಟ್ ಕಮ್ಮಿಟಿಯುವರಿಂದ ಆಗಿಂದಾಗ್ಗೆ ಒಪ್ಪಿಸಲ್ಪಟ್ಟ ಆಲೋಚನೆಗಳನ್ನೆಲ್ಲ ಮುಖ್ಯವಾಗಿ ಅನುಸರಿಸಿ ಉತ್ತಮಪಡಿಸುವ ಉಪಾಯಗಳ ತಪಶೀಲುಗಳನ್ನು ಪರಿಷ್ಕಾರ ಮಾಡುವದಲ್ಲದೆ, ಗವರ್ರ್ನಮೆಂಟಿನವರ ಮಂಜೂರಾತಿಯಾದ ಬಳಿಕ ಆ ವಿವರಿಸಲ್ಪಟ್ಟ ಉತ್ತಮಪಡಿಸುವ ಉಪಾಯುಗಳನ್ನ ಜಾರಿಗೆ ತರುವದು, ಬೋರ್ಡಿನ ಪ್ರಥಮ ಕರ್ತವ್ಯವಾಗಿರುತ್ತೆ. ಅಗತ್ಯ ಬಿದ್ದಾಗ್ಯೆ ಮತ್ತು ಹಣವಿದ್ದರೆ ಅಧಿಕ ಉಪಾಯಗಳನ್ನ ಕೂಡ ಬೋರ್ಡು ಒಪ್ಪಿಸಬಹುದು. ಜಮೀನುಗಳ ಮತ್ತು ಕಟ್ಟಡಗಳ ಬಲತ್ಕಾರವಾದ ಸಂಪಾದನೆಯನ್ನು ಕುರಿತು (ಪ್ರಕರಣ 23,) 1894ನೆ ವರುಷದ ಭೂಸಂಪಾದನೆ ವಿಷಯದ ರೆಗ್ಯುಲೇಷನಿನ ನಿಯಮಗಳು ಪ್ರಯೋಗವಾಗುವವಮಟ್ಟಿಗೆ ಅವುಗಳನ್ನು ಅನುಸರಿಸತಕ್ಕದ್ದು; ಮತ್ತು ಆ ರೆಗ್ಯುಲೇಷನಿನೊಳಗಿಲ್ಲದ ವಿಷಯಗಳನ್ನು ಕುರಿತು ಕೆಲವು ಅಧಿಕ ನಿಯಮಗಳು ಇದಕ್ಕೆ ಸೇರಿಸಲ್ಪಟ್ಟಿರುತ್ತವೆ. ಹೆಚ್ಚಾದ ತ್ವರೆಯಿಂದಲೂ ಮತ್ತು ಅಧಿಕ ಫಲೋತ್ಪಾದಕವಾಗಿಯೂ ಹಕ್ಕುಗಳು ಮುಂತಾದವುಗಳನ್ನ ಗೊತ್ತಿಗೆ ತರುವ ಬಗ್ಗಾಗಿ, ಬೋರ್ಡಿನ ಚೇರ್ಮೆನ್ನಿಗೆ, ಭೂಸಂಪಾದನೆ ವಿಷಯದ ರೆಗ್ಯುಲೇಷನಿನಂತೆ ಒಬ್ಬ ಡೆಪ್ಯುಟಿ ಕಮ್ಮಿಷನರು ಉಂಟಾಗಿರುವ ಅಧಿಕಾರಗಳನ್ನ ಕೊಡಲು ಯೋಚಿಸಿರುತ್ತೆ; ಆದರೆ ಇದು ಒಂದು ಪ್ರತ್ಯೇಕವಾದ ಇಸ್ತಿಹಾರುಮೂಲಕ ಮಾಡಲ್ಪಡುತ್ತೆ.

IVನೆ ಅಧ್ಯಾಯುವು (ಪ್ರಕರಣಗಳು 24ರಿಂದ 33ವರಿಗೆ) ಸ್ವತ್ತು ಮತ್ತು ನಗದಿಗೆ ಸಮ್ಮಂಧಪಟ್ಟಿರುತ್ತೆ. ಗವರನಮೆಂಟಿನವರ ಅಥವಾ ಮ್ಯೂನಿಸಿಪಲ್ ಕಮಿಷನರುಗಳ ಸ್ವಾಧೀನದಲ್ಲಿರುವ ಭೂಮಿಯನ್ನು ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರ ಬೋರ್ಡಿನ ವಶದಲ್ಲಿರತಕ್ಕದ್ದೆಂದು ಗವರನಮೆಂಟಿನವರು ಹುಕುಂ ಮಾಡಬಹುದು. ಸ್ವತ್ತನ್ನು ಸಂಪಾದಿಸಿ ಇಟ್ಟುಕೊಳ್ಳುವವರ ಸಮ್ಮಂಧವಾಗಿಯೂ, ತಮ್ಮ ವಶಕ್ಕೆ ಕೊಡಲ್ಪಟ್ಟ ಅಥವಾ ತಮ್ಮಿಂದ ಸಂಪಾದಿಸಲ್ಪಟ್ಟ ಸ್ವತ್ತನ್ನ ವಿಲೇವಾರಿ ಮಾಡುವವರ ಸಮ್ಮಂಧವಾಗಿಯೂ ಇರುವ ಬೋರ್ಡಿನ ಅಧಿಕಾರಗಳು 25ನೆ ಪ್ರಕರಣದಲ್ಲಿ ತಪಶೀಲಾಗಿ ಹೇಳಲ್ಪಟ್ಟಿರುತ್ತವೆ. 26ನೆ ಪ್ರಕರಣದಲ್ಲಿ ಇಂಪ್ರೂವ್‌ಮೆಂಟ್ ಫಂಡಿನ ಬಾಬುಗಳೆಲ್ಲಾ ಸೂಚಿಸಲ್ಪಟ್ಟಿರುತ್ತವೆ. ಮೈಸೂರು ಪಟ್ಟಣದ ಟ್ರಸ್ಟಿಗಳ ಬೋರ್ಡಿಗೆ ಸಾಲ ತೆಗದುಕೊಳ್ಳುವ ಅಧಿಕಾರಗಳಿಲ್ಲದಿರುವದು, ಮತ್ತು ಆ ಕಾರಣದಿಂದ ಹಣ ವಾಪಸು ಮಾಡುವ ಜವಾಬುದಾರಿಯೂ ಇಲ್ಲದಿರುವದು — ಈ ಸಂಗತಿಯು ಗಮನಿಸತಕ್ಕದ್ದಾಗಿದೆ; ಪರಂತು 26ನೆ ಪ್ರಕರಣದಂತೆ ಗವರ್ರ್ನಮೆಂಟಿನವರಿಂದಲೂ ಮ್ಯೂನಿಸಿಪಲ್ ಕಮ್ಮಿಷನಿನಿಂದಲೂ ಆಗಿಂದಾಗ್ಗೆ ಅವರ (ಬೋರ್ಡಿನ) ವಶಕ್ಕೆ ಕೊಡಲ್ಪಟ್ಟ ಹಣವನ್ನ ಸುಮ್ಮನೆ ಉಪಯೋಗಿಸುವದು ಬೋರ್ಡಿನ ಕೆಲಸವಾಗಿರುತ್ತೆ. ಆ ಫಂಡಿನ ಪ್ರಯೋಗದ ಸಮ್ಮಂಧವಾಗಿ ಹೇಳಬಹುದಾದ್ದೇನಂದರ,—ಗವರ್ರ್ನಮೆಂಟಿನವರಿಂದ ಮಾಡಲ್ಪಡಬೇಕಾಗಿರುವ ನೇಮಗಳಿಗೆ ಅನುಸಾರವಾಗಿ ಮುಂಗಡಗಳನ್ನ ಮನೆಕಟ್ಟುವ ಉದ್ದೇಶಗಳಿಗೋಸ್ಕರ, ಸರಿಯಾದ ಸಂದರ್ಭಗಳಲ್ಲಿ ಕೊಡುವ ಅಧಿಕಾರವು 27 (3)ನೆ ಪ್ರಕರಣದಂತೆ ಬೋರ್ಡಿಗೆ ಇರುವದಾಗುತ್ತೆ. ಲೆಕ್ಕಗಳನ್ನು ಮತ್ತು ಅವುಗಳ ತನಿಖೆ ಮಾಡುವದನ್ನು ಕುರಿತು ಇರುವ ನಿಯಮಗಳು ಸುಲಭ ಮಾಡಲ್ಪಟ್ಟಿರುತ್ತವೆ.

Vನೆ ಅಧ್ಯಾಯುವು (ಪ್ರಕರಣಗಳು 34ರಿಂದ 36ವರಿಗೆ) ಗವರ್ರ್ನಮೆಂಟಿನವರಿಂದ ಬೋರ್ಡಿನ ತಾಬೆಗಾಗಿ ಕೊಡಲ್ಪಟ್ಟವರೊಂದಿಗಿರುವ ಬೋರ್ಡಿನ ಉದ್ಯೋಗಸ್ಥರನ್ನು ಮತ್ತು ಸೇವಕರನ್ನು ಕುರಿತು ಇದೆ.

VIನೆ ಅಧ್ಯಾಯುವು (37ನೆ ಪ್ರಕರಣ) ಯಾವ ವಿದ್ಯಮಾನಗಳಲ್ಲಿ ಬೋರ್ಡನ್ನು ಅಗಲಿಸಬೇಕಾದ್ದು ಅವಶ್ಯವಾಗುತ್ತೊ ಅವುಗಳನ್ನು ಕುರಿತು ಇದೆ. (ಹಾಗಂದರೆ, ಅವರಿಂದ ನೆರವೇರಿಸಲ್ಪಡುವದಕ್ಕೋಸ್ಕರ ಮಂಜೂರಾದ ಉತ್ತಮಪಡಿಸುವ ಉಪಾಯಗಳೆಲ್ಲಾ ವಾಸ್ತವಿಕವಾಗಿ ಪೂರಯಿಸಲ್ಪಟ್ಟಾಗ;) ಮತ್ತು ಬೋರ್ಡಿನ ಆಸ್ತಿ ಮತ್ತು ಸಾಲಗಳಿಗೆ ಯಾರು ಉತ್ತರಾಧಿಕಾರಿ ಆಗಬೇಕೆಂಬುವದು, ಸ್ವತ್ತಿನ ವಿಲೇವಾರಿ ಮತ್ತು ನಿರ್ವಾಹ, ಅಪೂರ್ಣವಾಗಿರುವ ಕೆಲಸಗಳನ್ನ ಪೂರಯಿಸುವದು, ಇವುಗಳೇ ಮುಂತಾದ ಸಂದರ್ಭವಶವಾದ ವಿವಿಧ ಸಂಗತಿಗಳಿಗು ಕೂಡ ಇದರಲ್ಲಿ ಏರ್ಪಡಿಸಿರುತ್ತೆ.

VIIನೆ ಅಧ್ಯಾಯುವು (ಪ್ರಕರಣಗಳು 38ರಿಂದ 46 ವರಿಗೆ) ನೇಮಗಳು, ಒಳ ನಿಬಂಧನೆಗಳು, ದಂಡನೆಗಳು ಮುಂತಾದ್ದನ್ನು ಕುರಿತು ಇದೆ. ಇದರಲ್ಲಿರುವ ಪದ್ಧತಿಪ್ರಕಾರವಾದ ನಿಯಮಗಳಿಗೆ ಪ್ರತ್ಯೇಕವಾದ ಸ್ಪಷ್ಟೀಕರಣವು ಅಗತ್ಯವಿರುವದಿಲ್ಲ. ಪರಂತು, ಮನೆ ಕಟ್ಟುವ ವಿಷಯದಲ್ಲಿ ಸರಿಯಾದ ನೇಮಗಳನ್ನ ಮಾಡುವದಕ್ಕಾಗಿ ಬೋರ್ಡಿಗೆ ಅಧಿಕಾರ ಕೊಡುವ 39 (1)ನೆ ಪ್ರಕರಣದ (e) ಕಲಮು ಮತ್ತು ಬೋರ್ಡಿಗೆ ಸಲ್ಲತಕ್ಕ ಹಣಗಳನ್ನು ವಸೂಲು ಮಾಡುವ ವಿವಿಧ ವಿಧಾನಗಳ ವಿಷಯವಾಗಿರುವ 45ನೆ ಪ್ರಕರಣವು,—ಇವೆರಡೂ ಅವಧಾನಯೋಗ್ಯವಾಗಿರುತ್ತವೆ.